# ಅಧ್ಯಾಪಕ ಪಠ್ಯ
# TEACHER TEXT

## ಕನ್ನಡ
## KANNADA

ತರಗತಿ

V

ಕೇರಳ ಸರಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
2024

# 1.ಸಂಸ್ಕೃತಿ ಸೌರಭ

**ಮುನ್ನುಡಿ**

ಕರಾವಳಿ, ನಡುನಾಡು, ಮಲೆನಾಡು ಪ್ರದೇಶಗಳು ತಮ್ಮ ವಿಶಿಷ್ಟವಾದ ಕಲೆ, ಆಚಾರ ವಿಚಾರಗಳು, ಆಚರಣೆಗಳ ಮೂಲಕ ತಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಪ್ರತಿ ಪ್ರದೇಶವು ತನ್ನದೇ ಆದ ವಿಶೇಷತೆಯನ್ನು ಹೊಂದಿರುತ್ತದೆ. ಗ್ರಾಮೀಣ ಆಟಗಳು, ಕಥೆಗಳು, ಹಾಡುಗಳು, ಆಹಾರಗಳು ಇತ್ಯಾದಿಗಳ ಮೇಲೆ ಸಂಸ್ಕೃತಿಯ ಪ್ರಭಾವವಿರುತ್ತದೆ. ಈ ಸಂಸ್ಕೃತಿಯು ಭಾಷೆಯ ಮೇಲೆಯೂ ಪರಿಣಾಮನ್ನು ಬೀರುತ್ತದೆ. ಭಾಷಾ ಶೈಲಿಯು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವ್ಯತ್ಯಸ್ಥವಾಗಿರುತ್ತದೆ. ಅದಕ್ಕೆ ಕಾರಣ ಆ ಪ್ರದೇಶದಲ್ಲಿ ನೆಲೆನಿಂತಿರುವ ಭಿನ್ನವಾದ  ಸಂಸಂಸ್ಕೃತಿಯೇ ಆಗಿರಬಹುದು. ಕಲೆ ಮತ್ತು ಸಂಸ್ಕೃತಿ ಎಂಬುದು ಸಂಶೋಧನಾ ಯೋಗ್ಯವಾದ ವಿಷಯವಾಗಿದ್ದು ಅದರ ಅರ್ಥ ಮತ್ತು ವಿಸ್ತಾರ ಅಗಾಧವಾಗಿರುತ್ತದೆ. ಅದರ ಪ್ರಾಥಮಿಕ ಜ್ಞಾನ ಮಕ್ಕಳಿಗೆ ಲಭಿಸಲಿರುವ ವಿಚಾರಗಳು ಈ ಯುನಿಟ್ ನಲ್ಲಿ ಒಳಗೊಳ್ಳಿಸಲಾಗಿದೆ. ಆಧುನಿಕ ಕಾಲದಲ್ಲಿ ಸಮಾಜದಿಂದ ದೂರವಾಗುತ್ತಿರುವ ಆಚರಣೆಗಳು, ಅನಾದಿಕಾಲದಿಂದ ನಮ್ಮ ಸಂಪ್ರದಾಯದ ಹಿನ್ನೆಲೆಯಿಂದ ಬಂದಿರುವ ಕಟ್ಟುಪಾಡುಗಳು, ತುಳುನಾಡು ಅಥವಾ ಕರಾವಳಿ ಪ್ರದೇಶದಲ್ಲಿನ ಪ್ರಾದೇಶಿಕ ಮಹತ್ವದ ಕಥೆಗಳನ್ನು ಈ ಪಾಠಭಾಗಗಳಿಂದ ಮಗು ತಿಳಿಯುವುದು. ಇಂದು ಮರೆಯಾಗುತ್ತಿರುವ ಆಚರಣೆಗಳಲ್ಲೊಂದಾದ ಮನೆ ತುಂಬಿಸುವ ಸಂಪ್ರದಾದಯ ಕುರಿತಾಗಿ ‘ ಪುರುಶೋತ್ತಮ ಬಿಳಿಮಲೆ ’ ಬರೆದಿರುವ ಲೇಖನ, ‘ ಕೈಯಾರ ಕಿಞ್ಞಣ್ಣ ರೈ ’ ಅಳಿಯ ಕಟ್ಟು ಸಂಪ್ರದಾಯದ ಕುರಿತಾಗಿ ಬರೆದಿರುವ ಭೂತಾಳ ಪಾಂಡ್ಯ ಎಂಬ ಕಥನ ಕವನ, ‘ಬೇಕಲ ರಾಮನಾಯಕ ’ ಬರೆದ ಪುಳ್ಕೂರು ಬಾಚನ ಜಟ್ಟಿ ಕಥೆಯನ್ನು ನೀಡಲಾಗಿದೆ.

**ಕಲಿಕಾ ಉದ್ದೇಶಗಳು**

- ಕನ್ನಡ ಸಾಹಿತ್ಯದಲ್ಲಿರುವ ಕಲೆ, ಸಂಸ್ಕೃತಿಗೆ ಸಂಬಂಧಿಸಿದ ಸಾಹಿತ್ಯ ಕೃತಿಗಳನ್ನು ತಿಳಿಯುವುದು.
- ಗದ್ಯಭಾಗವನ್ನು ಓದಿ ಕಲೆ ಸಂಸ್ಕೃತಿಯ ಬೆಳವಣಿಗೆಯಲ್ಲಿ ಆಚರಣೆಗಳ ಮಹತ್ವ ತಿಳಿದುಕೊಳ್ಳುವುದು.
- ಗ್ರಾಮೀಣ ಭಾಗಗಳಲ್ಲಿರುವ ಆಚರಣೆಗಳು, ಮನರಂಜನಾ ಚಟುವಟಿಕೆಗೆ ಸಂಬಂಧಿಸಿದ ಆಶಯವನ್ನು ಪತ್ರ, ಭಿತ್ತಿಪತ್ರಿಕೆ ಮುಂತಾದ ವ್ಯವಹಾರ ರೂಪಗಳ ಮೂಲಕ ಪ್ರಕಟಪಡಿಸುವುದು.
- ಅಳಿಯಕಟ್ಟು ಸಂಪ್ರದಾಯ, ಅಣ್ಣತಂಗಿಯರ ವಾತ್ಸಲ್ಯದ ಕುರಿತು ಪಾಠಭಾಗದ ಆಧಾರದಲ್ಲಿ ವಿವಿಧ ವ್ಯವಹಾರ ರೂಪಗಳಲ್ಲಿ ಪ್ರಕಟಪಡಿಸುವುದು.
- ತುಳುನಾಡಿನ ವಿವಿಧ ಕ್ರೀಡೆಗಳ ಕುರಿತು ತಿಳಿದುಕೊಳ್ಳುವುದು.
- ಪದವಿಂಗಡಣೆ, ಸಂಯುಕ್ತಪದ ರಚನೆಯಲ್ಲಿ ತೊಡಗುವುದು.
- ತುಳುನಾಡಿನ ಐತಿಹ್ಯ ವ್ಯಕ್ತಿಗಳ ತಿಳಿದುಕೊಳ್ಳುವುದು.
- ಜನಪದ ಕ್ರೀಡೆಗಳ ಕುರಿತು ತಿಳಿದು ಲೇಖನದ ಮೂಲಕ ಪ್ರಕಟಿಸುವುದು.

## ಯುನಿಟ್ ಗ್ರಿಡ್

**ತರಗತಿ - 5 (BT) ಮೂಲ ಪಠ್ಯ**

**ಘಟಕದ ಹೆಸರು :** ಸಂಸ್ಕೃತಿ ಸೌರಭ — **ತರಗತಿ : 5**

**ಆಶಯ (Theme) :** ಕಲೆ ಮತ್ತು ಸಂಸ್ಕೃತಿ — **ಸಮಯ : 21**

| ಉಪ ಆಶಯಗಳು | ತಿಳುವಳಿಕೆಗಳು | ಸಾಹಿತ್ಯ ರೂಪಗಳು | ಸಾಮರ್ಥ್ಯಗಳು / ಕೌಶಲಗಳು | ಮೌಲ್ಯಗಳು/ ಮನೋಭಾವಗಳು | ಭಾಷಾ ಸತ್ಯಾಂಶಗಳು | ಭಾಷಾ ವ್ಯವಹಾರ ರೂಪಗಳು (ಚಟುವಟಿಕೆಗಳು) | ಕಲಿಕೋಪಕರಣಗಳು | ಮೌಲ್ಯಮಾಪನ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| ಪ್ರಾದೇಶಿಕ ಆಚರಣೆಗಳು<br><br>ಸ್ಥಳೀಯ ಸಂಪ್ರದಾಯಗಳು<br><br>ಪ್ರಾದೇಶಿಕ ಐತಿಹ್ಯದ ವ್ಯಕ್ತಿಗಳು | ನಮ್ಮ ಸಾಹಿತ್ಯದ ಬಹುಪಾಲು ಕಲೆಗಾಗಿ ಮೀಸಲಾಗಿದೆ. ದೇಶ ಕಾಲಕ್ಕನುಗುಣವಾಗಿ ಸಂಪ್ರದಾಯಗಳಲ್ಲಿ ಉಂಟಾದ ಬದಲಾವಣೆಗಳ ಕುರಿತು ತಿಳಿಯುವುದು. ಪ್ರಾದೇಶಿಕ ಮಹತ್ವವನ್ನು ಕಥೆಗಳಿಂದ ತಿಳಿಯುವುದು. | ಲೇಖನ (ಮನೆ ತುಂಬಿಸುವುದು )<br><br>ಕಥನ ಕವನ (ಭೂತಾಳ ಪಾಂಡ್ಯ)<br><br>ಕಥೆ (ಜಟ್ಟಿಯ ಫಜೀತಿ) | • ಓದುವುದು<br>• ಓದಿದ ವಿಷಯವನ್ನು ತರ್ಕಬದ್ಧವಾಗಿ ವಿಶ್ಲೇಷಿಸುವುದು.<br>• ಆಲಿಸುವುದು<br>• ಹಾಡುವುದು.<br>• ಅಭಿನಯ<br>• ಸಂವಹನ | • ನಾವು ಬೆಳೆದು ಬಂದ ಸಂಸ್ಕೃತಿಯ ಬಗ್ಗೆ ಹೆಮ್ಮೆಪಡುವುದು.<br>• ಕಲೆ ಸಂಸ್ಕೃತಿಗೆ ಸಂಬಂಧಿಸಿದ ಸಾಹಿತ್ಯ ಕೃತಿಗಳನ್ನು ಓದುವುದು.<br>• ಕಲೆ ಸಂಸ್ಕೃತಿಯ ಉಳಿವಿಗಾಗಿ ನಡೆಯುವ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗುವುದು.<br>• ಸಂಪ್ರದಾಯಗಳ ಹಿನ್ನೆಲೆಯನ್ನು ತಿಳಿದು ಆಚರಿಸುವ ಮನೋಭಾವ ಬೆಳೆಸುವುದು.<br>• ವಿವಿಧ ಪ್ರಾದೇಶಿಕ ಐತಿಹ್ಯ ವ್ಯಕ್ತಿಗಳ ಕುರಿತಾಗಿ ತಿಳಿದು ಅವರ ಬಗ್ಗೆ ಹೆಮ್ಮೆ ಪಡುವುದು. | • ಪದ ವಿಂಗಡಣೆ<br>• ಪ್ರಾಸ ಪದಗಳು<br>• ಸಂಯುಕ್ತ ಪದ ರಚನೆ<br>• ದ್ವಿರುಕ್ತಿ ಪದಗಳು<br>• ವಾಕ್ಯ ರಚನೆ<br>• ವರ್ಣಮಾಲೆ | • ಪತ್ರ ರಚನೆ<br>• ಭಿತ್ತಿ ಪತ್ರ ತಯಾರಿ<br>• ಸಂಚಿಕೆ ತಯಾರಿ<br>• ಟಿಪ್ಪಣಿ<br>• ಸಂಭಾಷಣೆ<br>• ಕಥೆ ಬರವಣಿಗೆ<br>• ವಿವರಣೆ ತಯಾರಿ<br>• ಪಾತ್ರ ಚಿತ್ರಣ<br>• ಲೇಖನ | • ವಿವಿಧ ಆಚರಣೆಗಳ ಕುರಿತಾದ ಚಿತ್ರ ಅಥವಾ ವೀಡಿಯೋಗಳು<br>• ಮಾದರಿ ಪತ್ರ<br>• ಮಾದರಿ ಸಂಚಿಕೆ<br>• ಭೂತಾಳ ಪಾಂಡ್ಯ ಕಥನ ಕವನದ ದೃಶ್ಯಾವಿಷ್ಕಾರ ವೀಡಿಯೋ<br>• ಐತಿಹ್ಯ ಕಥೆಗಳ ಪುಸ್ತಕ | • ಪತ್ರ ಬರವಣಿಗೆ<br>• ಭಿತ್ತಿಪತ್ರದ ಸೌಂದರ್ಯ<br>• ಟಿಪ್ಪಣಿ<br>• ಸಂಭಾಷಣೆಯ ವಿವಿಧ ಘಟಕಗಳು<br>• ವಿವರಣೆ<br>• ಪಾತ್ರ ಚಿತ್ರಣದ ಶೈಲಿ |

# 1. ಮನೆ ತುಂಬಿಸುವುದು

ಪಾಠದ ಆರಂಭದಲ್ಲಿ ಲೇಖಕರ ಪರಿಚಯ ಭಾಗವನ್ನು ಮಕ್ಕಳಲ್ಲಿ ಯಾರಾದರೊಬ್ಬರು ಗಟ್ಟಿಯಾಗಿ ಓದಲಿ. ಬಳಿಕ ಸರಳ ಪ್ರಶ್ನೆಗಳನ್ನು ಕೇಳಿ ಲೇಖಕರ ಪರಿಚಯ ಮಾಡಿಸಬಹುದು.

ಮಕ್ಕಳಲ್ಲಿ ಅವರು ಆಚರಿಸುವ ಕೃಷಿಗೆ ಸಂಬಂಧಿಸಿದ ಹಬ್ಬಗಳ ಕುರಿತಾಗಿ ಕೇಳುವುದು. ಮನೆ ತುಂಬಿಸುವುದು, ಹೊಸ ಅಕ್ಕಿ ಊಟ ಇತ್ಯಾದಿ ಹಬ್ಬಗಳನ್ನು ಆಚರಿಸುವ ಮಕ್ಕಳಿದ್ದಲ್ಲಿ ಅವರಿಂದ ಹೇಳಿಸುವುದು. ಬಳಿಕ ಪಾಠ ಭಾಗವನ್ನು ಮಕ್ಕಳು ವೈಯಕ್ತಿಕವಾಗಿ ಓದಲಿ. ಓದಿದ ಭಾಗದಿಂದ ಎಲ್ಲರೂ ಸಾಧ್ಯವಾದಷ್ಟು ಪ್ರಶ್ನೆಗಳನ್ನು ತಯಾರಿಸಲಿ. ಉತ್ತರವನ್ನು ಬರೆಯಲಿ. ಬಳಿಕ ಎರಡು ತಂಡಗಳಾಗಿ ಮಾಡಿ ಒಂದು ಗುಂಪು ಪ್ರಶ್ನೆ ಕೇಳುವುದು ಹಾಗೂ ಇನ್ನೊಂದು ಗುಂಪು ಉತ್ತರಿಸಲಿ. ಈ ಭಾಗದಲ್ಲಿ ಬಂದ ನವೀನ ಪದಗಳನ್ನು ಮತ್ತು ಅವುಗಳ ಅರ್ಥಗಳನ್ನು ಕರಿಹಲಗೆಯಲ್ಲಿ ಬರೆಯುವುದು.

ಈ ರೀತಿಯ ಚಟುವಟಿಕೆಗಳ ಮೂಲಕ ಪಾಠದ ಪೂರ್ಣ ಆಶಯವನ್ನು ಮಕ್ಕಳು ಗ್ರಹಿಸುವಂತೆ ಮಾಡುವುದು.

**ಚಟುವಟಿಕೆಗಳು**

ಮಕ್ಕಳು ಈಗಾಗಲೇ ಪ್ರಶ್ನೆ ಉತ್ತರಗಳನ್ನು ಬರೆದಿರುತ್ತಾರಲ್ಲವೇ? ಆದರೂ ಈ ಎಲ್ಲ ಪ್ರಶ್ನೆಗಳನ್ನು ಹಾಗೂ ಉತ್ತರಗಳನ್ನು ಬರೆಯುವಂತೆ ಹೇಳುವುದು.

**ಪಾಠ ಪ್ರವೇಶ**

ಈ ಪದ್ಯ ತುಳುನಾಡಿನ ಐಸಿರಿಯನ್ನು ಹೇಳಲಾಗಿದೆ. ತುಳುನಾಡಿನ ಸಮೃದ್ಧಿ ಜಾನಪದ ಆಟಗಳು, ಹಿಂದೆ ಅಲ್ಲಿ ಸ್ತ್ರೀಯರು ಆಳಿದ್ದಾರೆ ಎಂಬಿತ್ಯಾದಿ ವಿಚಾರಗಳು ಅಡಕವಾಗಿವೆ. ಪದ್ಯದ ಸಾಲುಗಳನ್ನು ಮಕ್ಕಳು ವೈಯಕ್ತಿಕವಾಗಿ ಗಟ್ಟಿಯಾಗಿ ಓದಲಿ. ಪ್ರತಿಯೊಬ್ಬರಲ್ಲಿ ಎರಡು ಸಾಲು ಅಥವಾ ಪೂರ್ತಿ ಪದ್ಯವನ್ನು ಓದಲು ಹೇಳಬಹುದು. ಬಳಿಕ ಮಕ್ಕಳನ್ನು ಗುಂಪುಗಳಾಗಿ ಮಾಡುವುದು ಗುಂಪಿನಲ್ಲಿ ಚರ್ಚಿಸಿ, ಮಕ್ಕಳು ಅವರಿಗೆ ಕೊಟ್ಟ ಭಾಗದ ಆಶಯವನ್ನು ಬರೆಯಲಿ. ಈ ಸಂದರ್ಭದಲ್ಲಿ ಅರ್ಥವಾಗದ ಪದಗಳ ಅರ್ಥವನ್ನು ಅಧ್ಯಾಪಕರು ಮಕ್ಕಳಿಗೆ ತಿಳಿಸುವುದು. ಅಧ್ಯಾಪಕರು ಈ ಕೆಳಗಿನ ಪ್ರಶ್ನೆಗಳನ್ನು ಕೇಳುವುದು.

- ಯಾವ ನಾಡನ್ನು ನೋಡಲು ಸಾವಿರ ಕಣ್ಣುಗಳು ಬೇಕು?
- ತುಳುನಾಡಿನ ಮೂಡಣದಲ್ಲಿ ಏನಿದೆ?
- ಪಡುವನದಲ್ಲಿ ಯಾವ ಬೆಳೆಗಳು ಕಂಡುಬರುತ್ತವೆ?
- ಜಾನಪದ ಆಟ ಕಲೆಗಳನ್ನು ಸೂಚಿಸುವ ಸಾಲುಗಳು ಯಾವುವು?
- ತುಳುನಾಡನ್ನು ಸ್ತ್ರೀಯರು ಆಳಿದ್ದಾರೆ ಎಂಬುದನ್ನು ಸೂಚಿಸುವ ಸಾಲುಗಳು ಯಾವುವು?

ಇತ್ಯಾದಿ ಪ್ರಶ್ನೆಗಳ ಬಳಿಕ ತುಳುನಾಡಿನ ಕುರಿತು ಮಕ್ಕಳ ಅಭಿಪ್ರಾಯವನ್ನು ಬರೆಯಲು ಹೇಳುವುದು.

ಮಕ್ಕಳಲ್ಲಿ ಅವರು ಮನೆಯಲ್ಲಿ ನಡೆಸುವ ಯಾವುದಾದರೂ ಆಚರಣೆಯ ಕುರಿತು ಹೇಳಲು ತಿಳಿಸುವುದು. ಎಲ್ಲ ಮಕ್ಕಳು ಹೇಳಲಿ. ವೈಯಕ್ತಿಕವಾಗಿ ಬರೆಯಲಿ. ಈ ಸಂದರ್ಭದಲ್ಲಿ ಆಯಾ ಮಗುವು ಬರೆದ ಆಚರಣೆಗೆ ಮಾಹಿತಿಗಳು ಇನ್ನೂ ಅಗತ್ಯವಿದ್ದಲ್ಲಿ ಅಧ್ಯಾಪಕರು ನೀಡುವುದು.

ಈ ಕೆಳಗೆ ಮಾದರಿಯಾಗಿ ಹೊಸ ಅಕ್ಕಿ ಊಟದ ಆಚರಣೆಯನ್ನು ಕೊಡಲಾಗಿದೆ.

**ಹೊಸ ಅಕ್ಕಿ ಊಟ**

ಹೊಸ ಅಕ್ಕಿ ಊಟದ ಆಚರಣೆಯು ಪ್ರಧಾನವಾಗಿ ಬೇಸಾಯ ಮಾಡುವವರ ಮನೆಯಲ್ಲಿ ಇಂದು ನಡೆಯುತ್ತಿದೆ. ಹಿಂದೆ ಇದನ್ನು ಎಲ್ಲರೂ ಆಚರಿಸುತ್ತಿದ್ದರು. ಹೊಸ ಅಕ್ಕಿ ಊಟದ ಕಾರ್ಯಕ್ರಮವು ಸಾಮಾನ್ಯವಾಗಿ ಕೊಯ್ಲು ಕಳೆದು ಭತ್ತವನ್ನು ಅಕ್ಕಿ ಮಾಡಿದ ಬಳಿಕ ಮಾಡುತ್ತಾರೆ ಅಥವಾ ಮನೆ ತುಂಬಿಸುವ ದಿನವೇ ಹೊಸ ಭತ್ತವನ್ನು ಸುಲಿದು ಆ ಅಕ್ಕಿ ಕಾಳುಗಳನ್ನು ಅನ್ನ ಅಥವಾ ಪಾಯಸದ ಅಕ್ಕಿಯೊಂದಿಗೆ ಸೇರಿಸಿ ಕೂಡ ಮಾಡುತ್ತಾರೆ.

ಹೊಸ ಅಕ್ಕಿ ಊಟಕ್ಕೆ ದಿನ ನಿಗದಿಪಡಿಸುತ್ತಾರೆ. ಬಳಿಕ ನೆರೆಹೊರೆಯವರಲ್ಲರನ್ನು ಆಮಂತ್ರಿಸುತ್ತಾರೆ. ಈ ದಿನ ಆ ಮನೆಯ

ಎಲ್ಲರೂ ಸೇರುತ್ತಾರೆ ಎಲ್ಲರು ಮಿಂದು ಶುಚಿರ್ಭೂತರಾಗಿ ಆ ವರ್ಷ ಹೊಸತಾಗಿ ಬೆಳೆದ ಬತ್ತದ ಅಕ್ಕಿಯನ್ನು ದೇವರ ಮುಂದಿರಿಸಿ ಪೂಜಿಸುತ್ತಾರೆ ಬಳಿಕ ಬೇಯಿಸಲಿಡುತ್ತಾರೆ. ಇದಕ್ಕಾಗಿ ಹೊಸ ಅಕ್ಕಿ ಬೇಯಿಸಿಸುವ ಮಡಿಕೆ ಅಥವಾ ಪಾತ್ರೆ ಇರುತ್ತದೆ. ಈ ಪಾತ್ರೆಯನ್ನು ವರ್ಷಕ್ಕೊಮ್ಮೆ ಹೊಸ ಅಕ್ಕಿ ಬೇಯಿಸಲು ಮಾತ್ರವೇ ಬಳಸುತ್ತಾರೆ. ಈ ಪಾತ್ರೆಯನ್ನು ಚೆನ್ನಾಗಿ ತೊಳೆದು ಬಳಿಕ ಪಾತ್ರೆಗೆ (ಸಾಮಾನ್ಯವಾಗಿ ಮಣ್ಣಿನ ಮಡಿಕೆ) ಸುಣ್ಣದಿಂದ ನಾಮವನ್ನು ಬಳಿದು ಪೊಲಿ ಬಳ್ಳಿ ಎನ್ನುವಂತಹ ಬಳ್ಳಿಯನ್ನು ಮಡಕೆಗೆ ಬೆಂಕಿತಾಗದ ಭಾಗಕ್ಕೆ ಸುತ್ತಲೂ ಕಟ್ಟುತ್ತಾರೆ. ಕುಟುಂಬದ ಸ್ತ್ರೀಯರಲ್ಲಿ ಮೂವರು ಐದು ಮಂದಿಯೋ ಈ ಮಡಕೆಯನ್ನು ಒಲೆಯ ಮೇಲಿರಿಸುತ್ತಾರೆ. ಇದಕ್ಕೆ ತೆಂಗಿನಕಾಯಿ ತುರಿಯನ್ನು ಸೇರಿಸುತ್ತಾರೆ. ಅತ್ತ ಅನ್ನವು ಅಲ್ಲದ ಇತ್ತಗಂಜಿಯೂ ಅಲ್ಲದ ರೀತಿಯಲ್ಲಿ ಬೆಂದಾಗ ತುಳಸಿ ಎಲೆಗಳನ್ನು ಹಾಕಿ ಒಲೆಯಿಂದ ಕೆಳಗಿಳಿಸುತ್ತಾರೆ.

ಈ ದಿನ ಮನೆಯಲ್ಲಿ ಔತಣದ ಊಟ. ಮುಳ್ಳು ಸೌತೆ ಅಥವಾ ಎಳೆಯ ಸೌತೆಯ ಚಳ್ಳಿ ಹಾಗೂ ಕೆಸುವಿನ ದಂಡು ಮತ್ತು ಹರಿವೆ ಬಳಸಿದ ಪದಾರ್ಥ ಮಾಡಿರಲೇಬೇಕು. ಹಾಗೆಯೇ ಅಕ್ಕಿ, ಬೆಲ್ಲ ಹಾಗೂ ಹೊದಲನ್ನು ಮಿಶ್ರ ಮಾಡಿದ ಖಾದ್ಯವು ಕಡ್ಡಾಯವಾಗಿರಬೇಕು. ಬೇಯಿಸಿದ ಹೊಸ ಅಕ್ಕಿ ಹಾಗೂ ಈ ಮಿಶ್ರಣವನ್ನು ದೇವರ ಮುಂದಿರಿಸಿದ ಬಳಿಕ ಮನೆಯ ಯಜಮಾನ ಹಾಗೂ ಮನೆಯವರೆಲ್ಲರೂ ಪ್ರಸಾದದಂತೆ ಸ್ವೀಕರಿಸಿದ ಬಳಿಕ ಬಂದ ನೆರೆಹೊರೆಯವರೆಲ್ಲರಿಗೂ ಹಂಚುತ್ತಾರೆ.

ಆಮೇಲೆ ನೆರೆ ಹೊರೆಯವರೆಲ್ಲರಿಗೂ ವಿವಿಧ ಖಾದ್ಯಗಳಿಂದ ಕೂಡಿದ ಔತಣದ ಊಟ ಬಡಿಸಲಾಗುತ್ತದೆ. ಇಲ್ಲಿಯ ಖಾದ್ಯಗಳ ವಿಶೇಷತೆ ಏನೆಂದರೆ ತಮ್ಮಲ್ಲಿ ನೆಟ್ಟು ಬೆಳೆಸಿದ ಕಾಯಿ ಪಲ್ಲೆಗಳನ್ನೇ ಇಲ್ಲಿ ಬಳಸುತ್ತಾರೆ. ನೆರೆಹೊರೆಯವರು ಕಾಯಿ ಪಲ್ಲೆಗಳನ್ನು ಕೊಡುವುದು ಇದೆ.

ಒಟ್ಟಿನಲ್ಲಿ ಸಮೃದ್ಧಿಯ ಗುರುತಾದ ಈ ಆಚರಣೆಯು ಎಲ್ಲರ ಮನಸ್ಸನ್ನೂ, ಹೊಟ್ಟೆಯನ್ನೂ ತುಂಬಿಸುವುದರೊಂದಿಗೆ ಪರಸ್ಪರ ಸ್ನೇಹ ಸೌಹಾರ್ದಗಳನ್ನು ಗಟ್ಟಿಗೊಳಿಸಲು ಸಹಾಯ ಮಾಡುತ್ತದೆ

.(ಈ ಆಚರಣೆಯಲ್ಲಿ ಪ್ರಾದೇಶಿಕವಾದ ಅಲ್ಪಸ್ವಲ್ಪ ವ್ಯತ್ಯಾಸಗಳಿರಬಹುದು ಅಧ್ಯಾಪಕರು ಅದಕ್ಕನುಸರಿಸಿ ಟಿಪ್ಪಣಿ ಬರೆಯಿಸುವುದು.)

✍ **ಪತ್ರ ಬರೆಯಿರಿ**

ಗೆಳೆಯ ಅಥವಾ ಗೆಳತಿಗೆ ಅಥವಾ ಸಂಬಂಧಿಕರಿಗೆ ಬರೆಯುವ ಪತ್ರವು ವೈಯಕ್ತಿಕ ಪತ್ರವಾಗಿದೆ ಎಂಬುದನ್ನು ತಿಳಿಸುವುದು ವೈಯಕ್ತಿಕ ಪತ್ರವನ್ನು ಬರೆಯುವ ರಚನಾ ಕ್ರಮವನ್ನು ಮಕ್ಕಳಿಗೆ ಮನದಟ್ಟು ಮಾಡಿಸುವುದು. ವೈಯಕ್ತಿಕ ಪತ್ರ ಬರೆಯುವಾಗ ಈ ಕೆಳಗಿನ ಅಂಶಗಳನ್ನು ಗಮನಿಸಬೇಕು ಎಂಬುದಾಗಿ ತಿಳಿಸುವುದು. ಗಮನಿಸಬೇಕಾದ ಅಂಶಗಳನ್ನು ಕರಿಹಲಗೆಯಲ್ಲಿ ಬರೆಯುವುದು.

- ಎಲ್ಲಿಂದ? ಯಾವಾಗ? ಯಾರಿಗೆ? (ಸ್ಥಳ, ದಿನಾಂಕ)
- ಆರಂಭ. (ಸಂಬಂಧಕ್ಕನುಗುಣವಾಗಿ)
- ವಿಷಯ
- ಮುಕ್ತಾಯ
- ವಿಳಾಸ

ಶಾಲೆಯಲ್ಲಿ ಓಣಂ ಹಬ್ಬ ಹೇಗೆ ನಡೆಯಿತು ಎಂಬುದರ ಕುರಿತು ಮಕ್ಕಳು ಬರೆಯಲಿ. ಬಳಿಕ ಪತ್ರದ ಸ್ವರೂಪವನ್ನು ಇಟ್ಟುಕೊಂಡು ಗೆಳೆಯ ಅಥವಾ ಗೆಳತಿಗೆ ಪತ್ರ ಬರೆಯಲಿ. ಗುಂಪಿನಲ್ಲಿ ಪತ್ರ ಸಿದ್ಧಪಡಿಸಲಿ. ಗುಂಪಿನಿಂದ ಒಬ್ಬರಂತೆ ಓದಲಿ. ಎಲ್ಲ ವಿಚಾರಗಳನ್ನು ಒಳಗೊಂಡ ಪತ್ರವನ್ನು ಅಧ್ಯಾಪಕರು ಮಾದರಿಯಾಗಿ ಕರಿಹಲಗೆಯಲ್ಲಿ ಬರೆಯುವುದು.

**ಮಾದರಿ ಹೀಗೂ ಇರಬಹುದಲ್ಲವೇ.**

ಉಪ್ಪಳ
18-9- 2023

ಪ್ರೀತಿಯ ರಶ್ಮಿಗೆ,

ನಿನ್ನ ಗೆಳತಿಯಾದ ರಜಿನಾಳ ನಮಸ್ಕಾರಗಳು.

ನಾವೆಲ್ಲರೂ ಕ್ಷೇಮ ನೀನು ಕ್ಷೇಮವೇ? ನಿನ್ನ ಉಳ್ಳಾಲದ ಶಾಲೆ ಹೇಗಿದೆ? ನಮ್ಮ ಶಾಲೆಯ ಹಾಗೆಯೇ ಇದೆಯೇ? ನಮ್ಮ ಶಾಲೆಯಲ್ಲಿ ಈ ವರ್ಷ ಓಣಂ ಹಬ್ಬದ ಆಚರಣೆ ಸಂಭ್ರಮದಿಂದ ನಡೆದಿದೆ. ಕಳೆದ ವರ್ಷ ನಾನು, ನೀನು ಸೇರಿ ಓಣಂ ಹಾಡು ಹಾಡಿದ್ದು ನೆನಪಿದೆಯಾ?. ಈ ವರ್ಷ ಓಣಂ ಹಬ್ಬದ ಆಚರಣೆ ಕಳೆದ ವರ್ಷಕ್ಕಿಂತಲೂ ಗೌಜಿಯಾಗಿ ನಡೆಯಿತು.

ಕಾಲುವಾರ್ಷಿಕ ಪರೀಕ್ಷೆ ಕಳೆದ ಮರುದಿನವೇ ಓಣಂ ಹಬ್ಬದ ಆಚರಣೆ ನಡೆಯಿತು. ಬೆಳಗ್ಗೆ 9:00 ಗಂಟೆಯಿಂದ 10 ಗಂಟೆಯವರೆಗೆ ಹೂ ರಂಗೋಲಿ ಸ್ಪರ್ಧೆ. ಯುಪಿ ವಿಭಾಗದಲ್ಲಿ ನಮ್ಮ ತರಗತಿಗೆ ದ್ವಿತೀಯ ಸ್ಥಾನ ಲಭಿಸಿದೆ. ಬಳಿಕ ಓಣಂ ಹಾಡು ಹಾಡುವ ಸ್ಪರ್ಧೆ ನಡೆಯಿತು. ಕಳೆದ ವರ್ಷ ಇದ್ದಂತೆಯೇ ನಾಲ್ಕನೇಯ ತರಗತಿಯ ವರೆಗಿನ ಮಕ್ಕಳಿಗೆ ಮಿಠಾಯಿ ಹೆಕ್ಕುವ ಸ್ಪರ್ಧೆ ಇತ್ತು. ಕಳೆದ ವರ್ಷ ಪ್ರಥಮ ಸ್ಥಾನ ದೊರಕಿದ್ದು ನಿನಗಲ್ಲವೇ? ಆಬಳಿಕ 7ನೇ ತರಗತಿಯ ಮಕ್ಕಳ ಹಗ್ಗ ಜಗ್ಗಾಟ ಸ್ಪರ್ಧೆ ನಡೆಯಿತು. ನಾವೆಲ್ಲರೂ ಅದನ್ನು ವೀಕ್ಷಿಸುತ್ತಿರುವಾಗಲೇ, ನಮ್ಮ ಸಮೀಪಕ್ಕೆ ಚೆಂಡೆ, ಮದ್ದಳೆ ಯೊಂದಿಗೆ ಓಲೆ ಕೊಡೆ ಹಿಡಿದ ವಾಮನ ಮತ್ತು ಮಹಾಬಲಿ ಬಂದರು. ನಮಗೆ ಫಕ್ಕನೆ ದಿಗ್ಭ್ರಮೆ ಯಾಯಿತು. ವೇಷ ಚಂದವಾಗಿತ್ತು .ಬಳಿಕ ಔತಣದ ಊಟವಿತ್ತು .ಪಾಯಸ ತುಂಬಾ ರುಚಿಯಾಗಿತ್ತು. ಊಟದ ಬಳಿಕ ನಾವೆಲ್ಲರೂ ಮನೆಗೆ ತೆರಳಿದೆವು.

ನಿಮ್ಮಲ್ಲಿ ಓಣಂ ಹಬ್ಬದ ಆಚರಣೆ ಇತ್ತೆ ?ಓಣಂ ಆಚರಣೆ ಇಲ್ಲದಿದ್ದರೂ ಬೇರೆ ಯಾವುದಾದರೂ ಹಬ್ಬ ಆಚರಿಸುತ್ತಿರಬಹುದಲ್ಲವೇ? ನಿನ್ನ ತಂಗಿ, ಅಕ್ಕನನ್ನು ನಾನು ಕೇಳಿದುದಾಗಿ ಹೇಳು.

ನೀನು ನನಗೂ ನಿಮ್ಮ ಶಾಲೆಯ ವಿಶೇಷಗಳನ್ನು ತಿಳಿಸಿ ಪತ್ರ ಬರೆಯಬೇಕು. ಬೇರೆ ವಿಶೇಷವೇನು ಇಲ್ಲ.

ಇತಿ ನಿನ್ನ ಗೆಳತಿ
ರಜಿನಾ

ರಶ್ಮಿ ಕೆ
ಐದನೇ ತರಗತಿ
ಎ.ಯು.ಪಿ ಶಾಲೆ ಉಳ್ಳಾಲ
ಅಂಚೆ ಉಳ್ಳಾಲ.

ನಾವು ಸಾಮಾನ್ಯವಾಗಿ ಭಿತ್ತಿ ಪತ್ರಗಳನ್ನು ಕಾಣುತ್ತೇವೆ. ಒಂದೇ ವಿಚಾರವನ್ನು ಭಿತ್ತಿ ಪತ್ರ, ಕರಪತ್ರ, ಆಮಂತ್ರಣ ಪತ್ರಗಳ ಮೂಲಕ ಪ್ರಕಟಪಡಿಸಬಹುದು. ಭಿತ್ತಿಪತ್ರದಲ್ಲಿ ಪ್ರಧಾನವಾದ ಆಶಯವು ಓದುಗನ ಗಮನ ಸೆಳೆಯುವಂತಿರಬೇಕು. ಸಂಕ್ಷಿಪ್ತವಾಗಿರಬೇಕು. ಸಮಯ, ದಿನಾಂಕ, ಸ್ಥಳ ಇರಬೇಕು. ಆಕರ್ಷಕವಾದ ಪದಗಳ ಬಳಕೆ ಇರಬೇಕು. ಭಿತ್ತಿಪತ್ರದ ಅಕ್ಷರಗಳ ಗಾತ್ರದಲ್ಲಿ, ಬಣ್ಣದಲ್ಲಿ ವೈವಿಧ್ಯವಿದ್ದರೆ ಹೆಚ್ಚು ಗಮನ ಸೆಳೆಯಯುತ್ತದೆ. ಚಿತ್ರಗಳನ್ನು ಒಳಗೊಳ್ಳಿಸಬಹುದು ಎಂಬಿತ್ಯಾದಿ ವಿಚಾರಗಳನ್ನು ಕರಿಕಲಗೆಯಲ್ಲಿ ಸೂಚಕದಂತೆ ಬರೆಯುವುದು. ಮಾದರಿಯಾಗಿ ವಿವಿಧ ಭಿತ್ತಿಪತ್ರಗಳನ್ನು ಪ್ರದರ್ಶಿಸಬಹುದು.

**ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಜಿಬೈಲು**
**ದಸರಾ ನಾಡಹಬ್ಬ ದಿನಾಚರಣೆ**
17 -10 - 2023 ರಂದು
ಶಾಲಾ ಸಭಾಂಗಣದಲ್ಲಿ
ನಾಡು, ನುಡಿ, ಕಲೆ, ಸಂಸ್ಕೃತಿಗೆ ಸಂಬಂಧಿಸಿದ ವಿವಿಧ ಕಾರ್ಯಕ್ರಮಗಳು.
(ವಿದ್ಯಾರ್ಥಿಗಳಿಂದ ಹಾಗೂ ಹಳೆ ವಿದ್ಯಾರ್ಥಿಗಳಿಂದ)
ಎಲ್ಲರಿಗೂ ಸ್ವಾಗತ.

✍ **ಸಂಚಿಕೆ ತಯಾರಿಸಿರಿ**

ಮಕ್ಕಳಲ್ಲಿ ಹಬ್ಬಕ್ಕೆ ಸಂಬಂಧಿಸಿದ ಹಾಡುಗಳನ್ನು ಹಿರಿಯರಿಂದ ಕೇಳಿ ಅಥವಾ ಗ್ರಂಥಾಲಯ ಹಾಗೂ ಇತರ ಮಾಧ್ಯಮಗಳಿಂದ ಸಂಗ್ರಹಿಸಲು ಹೇಳುವುದು. ಎಲ್ಲಾ ಹಾಡುಗಳನ್ನು ಒಟ್ಟು ಸೇರಿಸಿ ಸಂಚಿಕೆ ತಯಾರಿಸುವುದು. ಸಂಚಿಕೆಗೆ ಹೆಸರನ್ನು ಸೂಚಿಸಲು ವಿದ್ಯಾರ್ಥಿಗಳಲ್ಲಿ ಹೇಳುವುದು. ಕರಿಹಲಗೆಯಲ್ಲಿ ಎಲ್ಲಾ ಹೆಸರುಗಳನ್ನು ಬರೆಯುವುದು. ಅಧ್ಯಾಪಕರು ಸೂಕ್ತವಾದ ಹೆಸರನ್ನು ಗಮನಿಸಿ ಪ್ರತಿಯೊಂದು ಶೀರ್ಷಿಕೆಯ ಆಶಯ ತಿಳಿಸುವುದು. ಮಕ್ಕಳಲ್ಲಿ ಪ್ರತಿಯೊಬ್ಬರಿಗೂ ಆಯ್ಕೆಯ ಅವಕಾಶ ನೀಡುವುದು. ಬಹುಮತ ದೊರಕಿದ ಹೆಸರನ್ನು ಸಂಚಿಕೆಗೆ ನೀಡುವುದು. ಮುನ್ನುಡಿ,ಅನುಕ್ರಮಣಿಕೆ ಇತ್ಯಾದಿಗಳಿರಬೇಕು. ಶಾಲಾ ಸಾಹಿತ್ಯಸಭೆ, ಅಸೆಂಬ್ಲಿ,ಕಲಿಕೋತ್ಸವ ಇತ್ಯಾದಿ ಸಂದರ್ಭಗಳಲ್ಲಿ ಬಿಡುಗಡೆ ಮಾಡಬಹುದು. ಸಂಚಿಕೆಯ ಮುಖಪುಟವನ್ನು ಆಕರ್ಷಕವಾಗಿ ರಚಿಸಲು ಯಾವುದಾದರೂ ಒಂದು ಮಗುವಿಗೆ ಸೂಚಿಸಬಹುದು. ಇದೇ ರೀತಿ ಮುನ್ನುಡಿ ,ಅನುಕ್ರಮಣಿಕೆ ಬರೆಯಲು ಸೂಚಿಸಬಹುದು. ಈ ಎಲ್ಲ ಸಂದರ್ಭಗಳಲ್ಲಿ ಅಧ್ಯಾಪಕರು ಮಗುವಿಗೆ ಸೂಕ್ತವಾದ ನಿರ್ದೇಶನಗಳನ್ನು ನೀಡುವುದು.
ಸಂಚಿಕೆಯಲ್ಲಿ ಕನಿಷ್ಠ 10 ಹಾಡುಗಳಾದರು ಇರಬೇಕು. ಮಾದರಿಯಾಗಿ ಕೆಳಗೆ ಕೊಡಲಾಗಿದೆ ಇದೇ ರೀತಿಯಲ್ಲಿ ಸಂಗ್ರಹಿಸಿ ಸಂಚಿಕೆ ತಯಾರಿಸಲಿ.

ನೂತನ ಪಯಣ ನಕ್ಷತ್ರ ಗಮನ ಇದೇ ಯುಗಾದಿಯ ಜನನ
ಹಸಿರು ತೋರಣ ಧ್ವಜಾರೋಹಣ ಯುಗಾದಿ ಹಬ್ಬದ ಸುದಿನ |ನೂತನ|
ಕೋಗಿಲೆಯ ಕುಹು ಕುಹು ವಸಂತ ಮಾಸದಲ್ಲಿ
ಅಲಂಕರಿಸಿದೆ ಜಗವು ಈ ಚಿಗುರಿನ ತೋರಣದಿ
ಚಂದ್ರಮಾನೇನ ಚಂದ್ರಮಾನೇನ|ನೂತನ|
ಕಹಿ ಸ್ವಲ್ಪ ಹುಳಿ ಸ್ವಲ್ಪ
ಒಗರನ್ನು ಸ್ವಲ್ಪ ಬೆರೆಸು ಖಾರದೊಂದಿಗೆ ಉಪ್ಪನು ಹಾಕಿ ಸಿಹಿಯನ್ನು ಸೇರಿಸು.
ಈ ಷಡ್ರೂಚಿಗಳಿಗೆ ಅದ್ಭುತ ಸಾರ
ಬದುಕಿಗೆ ಪರಿಹಾರ
ವರುಷದಿ ಮೊದಲನೇ ಹಬ್ಬವಿದು ಪ್ರತಿ ಕಾರ್ಯಕ್ಕೂ ಬುನಾದಿ ಇದು
ವಿಕಾರಿನಾಮವು ಉರುಳಿಹುವುದು ಶಾರ್ವರಿ ನಾಮದಿ ಬರುತ್ತಿಹುದು ನಮ್ಮ ಸಂಸ್ಕೃತಿಯ ಹೊಸವರುಷ |ನೂತನ|

✍ **ಪದವಿಂಗಡಿಸಿ ಬರೆಯಿರಿ**

ಪಾಠಭಾಗವನ್ನು ಇನ್ನೊಮ್ಮೆ ಓದಲು ಸೂಚಿಸಿ ಓದಿದ ಭಾಗದಲ್ಲಿರುವ ಇಂತಹ ಪದಗಳನ್ನು ಗುರುತಿಸಲು ಹೇಳುವುದು.
ತಂದಿಡುವನು- ತಂದು +ಇಡುವನು
ಮನೆಯಲ್ಲಿರುವ- ಮನೆಯಲ್ಲಿ+ ಇರುವ
ಮಾವಿನೆಲೆ -ಮಾವಿನ +ಎಲೆ
ಬೆಳೆಯುತ್ತಿರುತ್ತದೆ -ಬೆಳೆಯುತ್ತಾ +ಇರುತ್ತದೆ
ಬಳಿಕ ಅಭ್ಯಾಸದಲ್ಲಿ ಕೊಟ್ಟ ಪದಗಳನ್ನು ವಿಂಗಡಿಸಲು ಹೇಳುವುದು. ಪದವಿಂಗಡಿಸುವಾಗ ಎರಡೂ ಪದಗಳಿಗೂ ಅರ್ಥವಿದೆ ಎಂಬುದನ್ನು ಸೂಚಿಸುವುದು.

✍ **ವಾಕ್ಯ ರಚಿಸಿರಿ**

ಅಡಿಗೆರೆಳೆದ ಪದಗಳನ್ನು ಮೊದಲು ಬರೆಯಲು ಹೇಳುವುದು ಮಕ್ಕಳು ಸ್ವತಹ ಅರ್ಥ ಕಂಡುಕೊಳ್ಳಲಿ ಸಾಧ್ಯವಾಗದಿದ್ದಲ್ಲಿ ಅರ್ಥವನ್ನು ಅಧ್ಯಾಪಕರು ಸ್ಪಷ್ಟಪಡಿಸುವುದು. ಮಾದರಿಯಾಗಿ ಹಲವು ವಾಕ್ಯಗಳನ್ನು ಕೊಡುವುದು. ಬಳಿಕ ಮಕ್ಕಳು ಪದಗಳನ್ನು ಬಳಸಿ ವಾಕ್ಯ ರಚಿಸಲಿ. ತಪ್ಪಿದ್ದಲ್ಲಿ ಅಧ್ಯಾಪಕರು ತಿದ್ದಿ ಸರಿಪಡಿಸುವುದು.

- ಎಚ್ಚರಿಕೆ
- ನಿಗದಿಪಡಿಸಿದ
- ವಾರ ಮುಂಚಿತವಾಗಿ

- ರಸ್ತೆಯಲ್ಲಿ ಎಚ್ಚರಿಕೆಯಿಂದ ನಡೆಯಬೇಕು.
- ನಿಗದಿಪಡಿಸಿದ ದಿನದಂದು ಶಾಲೆಯ ಕಲೋತ್ಸವ ಜರಗಿತು.
- ಪರೀಕ್ಷೆಗೆ ವಾರ ಮುಂಚಿತವಾಗಿ ನಾವು ಸಿದ್ದರಾಗಬೇಕು.

## ಭೂತಾಳ ಪಾಂಡ್ಯ

ಪುರಾಣದ ಪ್ರಕಾರ ತುಳುನಾಡು ಪರಶುರಾಮನ ಸೃಷ್ಟಿ ಎಂಬ ನಂಬಿಕೆ ಇದೆ. ತುಳು ಭಾಷೆಯನ್ನು ಪ್ರಭಾವಿಯಾಗಿ ಮಾತನಾಡುವ ಭಾರತದ ಪ್ರದೇಶವಾಗಿದೆ ತುಳುನಾಡು. ತುಳುವನಾಡು, ತುಳುದೇಶ ಎಂಬುದಾಗಿ ಕರೆಯಲ್ಪಡುವ ತುಳುನಾಡಿನ ಭಾಗವು ತೆಂಗು ಕಂಗು ಬೆಟ್ಟ ಗುಡ್ಡ ಹಳ್ಳಕೊಳ್ಳ ಗದ್ದೆ ಬಯಲಿನಿಂದ ಕೂಡಿದ ಸುಂದರವಾದ ಭೂಪ್ರದೇಶವಾಗಿದೆ. ಇಲ್ಲಿಯ ಆಚರಣೆಗಳಲ್ಲಿ ಹಬ್ಬಗಳಲ್ಲಿ ವೈವಿಧ್ಯತೆ ಇದೆ. ತುಳುನಾಡಿನಲ್ಲಿ ಹೆಣ್ಣುಮಕ್ಕಳಿಗೆ ತಾಯಿ ಮನೆಯಲ್ಲಿ ವಿಶೇಷ ಸ್ಥಾನವಿದೆ. ಇಲ್ಲಿಯ ಸಂಪ್ರದಾಯದಲ್ಲಿ ಕೊಟ್ಟ ಹೆಣ್ಣು ಕುಲದಿಂದ ಹೊರಗೆ ಎಂಬ ಮಾತು ತುಳುನಾಡಿಗೆ ಅನ್ವಯವಾಗುವುದಿಲ್ಲ. ತುಳುನಾಡಿನ ಹೆಣ್ಣು ಮಕ್ಕಳಿಗೆ ತವರಿನಲ್ಲಿ ವಿಶೇಷವಾದ ಸ್ಥಾನಮಾನಗಳನ್ನು ಕಲ್ಪಿಸಿಕೊಟ್ಟ ಭೂತಾಳ ಪಾಂಡ್ಯ ಇತಿಹಾಸದ ಪುಟಗಳಲ್ಲಿ ಅಮರನಾಗಿದ್ದಾನೆ.

ಕೈಯಾರ ಕಿಂಞಣ್ಣ ರೈಯವರ ಭಾವಚಿತ್ರವನ್ನು ಎಲ್. ಸಿ. ಡಿ. ಯ ಮೂಲಕ ತೋರಿಸುವುದು. ಕವಿಯ ಪರಿಚಯ ಹೇಳುವುದು. ಕವಿಗಳು ಬರೆದಿರುವ ಯಾವುದಾದರೂ ಕವಿತೆ ತಿಳಿದಿದೆಯೇ? ಎಂದು ಪ್ರಶ್ನಿಸುವುದು. ಬಳಿಕ ಕಥನ ಕವನವನ್ನು ಓದುವುದು. ಮಕ್ಕಳಲ್ಲಿ ಮೌನವಾಗಿ ಓದಲು ಹೇಳುವುದು. ಅರ್ಥಕೋಶದ ಸಹಾಯದಿಂದ ಪದಗಳ ಅರ್ಥವನ್ನು ತಿಳಿದುಕೊಳ್ಳಲು ಹೇಳುವುದು, ಆಶಯವನ್ನು ತಿಳಿದುಕೊಳ್ಳುವುದು. ಅಧ್ಯಾಪಕರು ರಾಗ ತಾಳ ಲಯಬದ್ಧವಾಗಿ ಹಾಡುವುದು.

### ✍ ಉತ್ತರಿಸಿರಿ

ಓದಿ, ಹಾಡಿ, ಆಸ್ವಾದಿಸಿ ಆಶಯವನ್ನು ತಿಳಿದುಕೊಳ್ಳಲಿ. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಗುಂಪುಗಳಲ್ಲಿ ಚರ್ಚಿಸಿ ಉತ್ತರ ಬರೆಯಲಿ. ಬಳಿಕ ತರಗತಿಯಲ್ಲಿ ಓದಲಿ. ಉತ್ತರ ಸಮರ್ಪಕವಾಗಿದೆಯೇ ಎಂದು ಇತರ ವಿದ್ಯಾರ್ಥಿಗಳು ಚರ್ಚಿಸಲಿ. ಅಧ್ಯಾಪಕರ ಸಹಾಯದಿಂದ ಉತ್ತಮಪಡಿಸಿ ಮಂಡಿಸುವುದು.

### ✍ ಊಹಿಸಿ ಬರೆಯುವುದು

ದೇವಪಾಂಡ್ಯ ನ ಸಹೋದರಿ ಸತ್ಯವತಿಯು ತನ್ನ ಮಗನನ್ನು ಬಲಿ ಕೊಡಲು ಒಪ್ಪದೇ ಇರುತ್ತಿದ್ದರೆ ಪರಿಣಾಮ ಏನಾಗುತ್ತಿತ್ತು? ಎಂದು ಪ್ರಶ್ನಿಸಿ, ಮಕ್ಕಳು ಊಹಿಸಿ ಹೇಳಲು ಅವಕಾಶ ಮಾಡಿಕೊಡುವುದು. ಮಕ್ಕಳು ತಮ್ಮ ಊಹೆಯನ್ನು ಸ್ವಂತ ವಾಕ್ಯಗಳಲ್ಲಿ ಹೇಳುವುದು. ಆಬಳಿಕ ಗುಂಪಿನಲ್ಲಿ ಟಿಪ್ಪಣಿ ಬರೆಯುವುದು. ಬರೆದು, ಇದನ್ನು ತರಗತಿಯಲ್ಲಿ ಓದಿ ಅಧ್ಯಾಪಕರ ಸಹಾಯದಿಂದ ಉತ್ತಮ ಪಡಿಸುವುದು. ಬರವಣಿಗೆ ಹೇಗಿರಬೇಕು? ಎಂದು ಪ್ರಶ್ನಿಸಿ, ಸೂಚಕಗಳನ್ನು ಕಂಡುಕೊಳ್ಳಲು ಸಹಾಯ ಮಾಡುವುದು. ಸ್ವಯಂ ನಿರ್ಣಯಕ್ಕೆ ಅವಕಾಶ ಮಾಡಿಕೊಡುವುದು.

**ಸೂಚಕಗಳು**

- ಸರಳವೂ ಸ್ಪಷ್ಟವೂ ಆಗಿರಬೇಕು
- ಆಶಯಗಳು ಕ್ರಮ ಪ್ರಕಾರವಾಗಿರಬೇಕು ಸ್ವಂತಿಕೆ ಇರಬೇಕು
- ಕುತೂಹಲಕಾರಿ ಆಗಿರಬೇಕು .
- ಭಾಷಾಶೈಲಿ

**ಊಹಿಸಿ ಬರೆಯಿರಿ....... ಹೀಗೂ ಆಗಬಹುದು**

ದೇವಪಾಂಡ್ಯ ವರ್ತಕನು ತುಂಬಾ ಶ್ರೀಮಂತ ವರ್ತಕನಾಗಿದ್ದನು. ದುಡ್ಡು ಗಳಿಸಿ ಗುಣವಂತನಾಗಿದ್ದ ದೇವಪಾಂಡ್ಯ ತನ್ನ ವ್ಯಾಪಾರವನ್ನು ಹೆಚ್ಚಿಸುವುದಕ್ಕೋಸ್ಕರ ದೊಡ್ಡ ಹಡಗನ್ನು ನೀರಿಗಿಳಿಸುವ ಸಂತಸದಲ್ಲಿದ್ದನು. ಜೋಯಿಸರಲ್ಲಿ ದಿನ, ತಿಥಿ, ಮುಹೂರ್ತವನ್ನು ತಿಳಿದು ಶುಭ ಸಮಯದಲ್ಲಿ ಹಡಗನ್ನು ನೀರಿಸಲು, 'ಹಡಗು ನಿಲ್ಲಲಿ ನರಬಲಿ ಸಲ್ಲಲಿ' ಎಂಬ ಶಬ್ದವು ಕೇಳಿತು. ಸಿಡಿಲೆರಗಿದಂತಾಗಿ ಪಾಂಡ್ಯನು ಯಾರನ್ನು ಬಲಿ ಕೊಡಲಿ? ಎಂದಾಗ, "ನಿನಗೆ ಏಳು ಜನ ಮಕ್ಕಳು. ಅವರಲ್ಲಿ

ಒಬ್ಬನನ್ನು ಬಲಿಕೊಡು" ಎಂದಿತು. ಹೆಂಡತಿಯನ್ನು ಕೇಳಿದಾಗ ಒಲ್ಲದ ಆಕೆ ಮಕ್ಕಳ ಸಹಿತ ತಾಯಿ ಮನೆಗೆ ಹೊರಟೇ ಬಿಟ್ಟಳು. ಚಿಂತಾಕ್ರಾಂತನಾಗಿ ದೇವಪಾಂಡ್ಯ ಹಾಸಿಗೆ ಹಿಡಿದಾಗ ಸಹೋದರಿ ಸತ್ಯವತಿಯು ತನ್ನ ಮಗನನ್ನು ಬಲಿಕೊಡಲು ಸಿದ್ಧವಾಗುತ್ತಾಳೆ. ಇದು ಕಥಾ ಸಂದರ್ಭ.

ಒಂದು ವೇಳೆ ಆಕೆಯು ತನ್ನ ಮಗನನ್ನು ಬಲಿಕೊಡಲು ಸಿದ್ಧಳಾಗದೆ ಇರುತ್ತಿದ್ದರೆ ಕೊಂಡೋದರ ಭೂತ ಕುಪಿತಗೊಂಡು ದೇವಪಾಂಡ್ಯನ ಸಿರಿ, ಸಂಪತ್ತು, ನೆಮ್ಮದಿ, ಕುಟುಂಬ ಎಲ್ಲವನ್ನು ಕಿತ್ತುಕೊಂಡು ಆತನನ್ನು ನಿರ್ಗತಿಕ ನನ್ನಾಗಿ ಮಾಡುತ್ತಿತ್ತು.

ಊರವರೆಲ್ಲರೂ ಪಾಂಡ್ಯನಿಗೆ ಛೀಮಾರಿ ಹಾಕುವ ಪ್ರಸಂಗ ಒದಗಿ ಬರುತ್ತಿತ್ತು .ಊರವರು ಹಳೆಯ ನಂಬಿಕೆಗಳಿಗೆ ಒಳಗಾಗಿರುತ್ತಾರೆ. ಹಾಗಾಗಿ ಅವರು ನಮಗೇನಾದರೂ ಆದರೆ ಎಂದು ಭಯಭೀತರಾಗುತ್ತಿದ್ದರು ಅವರು ಭಾವಿಸಿದಂತೆಯೇ ಊರಿಗೆ ಕ್ಷಾಮ ಬಂದು ಎಲ್ಲ ಜೀವರಾಶಿ ನಶಿಸಿಹೋಗಿ ಪಾಂಡ್ಯ ದೇಶವೇ ನಶಿಸಿ ಹೋಗುತ್ತಿತ್ತು. ಮುಂದಿನ ಜನಾಂಗದವರಿಗೆ ದಂತಕತೆಯಾಗಿ ಮಾರ್ಪಡುತಿತ್ತು.

## ✍ ಸಂಭಾಷಣೆ ಬರೆಯಿರಿ

ಕಥನ ಕವನದಲ್ಲಿ ಬಂದ ದೇವಪಾಂಡ್ಯ ನ ಸಹೋದರಿಯು ಮಗನನ್ನು ಬಳಿ ಕೊಡಲು ನಿರ್ಧರಿಸಿ ಅಣ್ಣನ ಬಳಿಗೆ ಬಂದಳು. ಆಗ ಅಣ್ಣ ತಂಗಿಯರ ನಡುವೆ ನಡೆದ ಸಂಭಾಷಣೆಯ ಬಗ್ಗೆ ಮಕ್ಕಳು ಗುಂಪುಗಳಲ್ಲಿ ಚರ್ಚಿಸಲಿ. ಅಧ್ಯಾಪಕರು ಈ ಬಗ್ಗೆ ಸರಳ ಪ್ರಶ್ನೆಗಳನ್ನು ಕೇಳುವುದು.

- ದೇವಪಾಂಡೆನು ನರಬಲಿ ಕೊಡುವ ನಿರ್ಧಾರ ಮಾಡಲು ಕಾರಣವೇನು?
- ತನ್ನ ಮಕ್ಕಳಲ್ಲಿ ಒಬ್ಬನನ್ನು ಬಲಿಕೊಡಲು ನಿರ್ಧಾರ ಮಾಡಿದುದು ಯಾಕೆ?
- ಹೆಂಡತಿ ಮಕ್ಕಳನ್ನು ಬಲಿಕೊಡಲು ಒಪ್ಪದಿದ್ದಾಗ ಚಿಂತಾಕ್ರಾಂತನಾಗಿದ್ದ ಅಣ್ಣ ಪಾಂಡ್ಯನನ್ನು ತಂಗಿ ಹೇಗೆ ಸಂತೈಸಿದಳು?

ಇತ್ಯಾದಿ ಪ್ರಶ್ನೆಗಳನ್ನು ಕೇಳುತ್ತಾ ಮಕ್ಕಳನ್ನು ಸಂಭಾಷಣೆ ಬರೆಯಲು ಪ್ರೇರೇಪಿಸುವುದು. ಅನಂತರ ಮಕ್ಕಳು ಬರೆದ ಸಂಭಾಷಣೆಯನ್ನು ತರಗತಿಯಲ್ಲಿ ಮಂಡಿಸಲಿ. ಮಕ್ಕಳು ಗುಂಪಿನಲ್ಲಿ ಮೌಲ್ಯನಿರ್ಣಯ ಮಾಡಲಿ. ಮೌಲ್ಯ ನಿರ್ಣಯದ ಆಧಾರದಲ್ಲಿ ಸಂಭಾಷಣೆಯನ್ನು ಮಕ್ಕಳು ಪರಿಷ್ಕರಿಸಿ ಬರೆಯಲಿ. ನಂತರ ಅಧ್ಯಾಪಕರ ಮಾದರಿ ಸಂಭಾಷಣೆಯನ್ನು ತರಗತಿಯಲ್ಲಿ ಪ್ರದರ್ಶಿಸುವುದು.

ಸತ್ಯವತಿ : ಅಣ್ಣ ಯಾಕೆ ಚಿಂತಿಸುತ್ತಿದ್ದೀರಿ ?
ದೇವಪಾಂಡ್ಯ: ಹಡಗನ್ನು ನೀರಿಗಿಳಿಸಬೇಕಾದರೆ ನರಬಲಿ ಬೇಕಂತೆ.
ಸತ್ಯವತಿ : ನರಬಲಿ ಕೇಳಿದವರಾರು ?
ದೇವಪಾಂಡ್ಯ: ಕೊಂಡೋದರ ಭೂತ.ನನ್ನ ಮಕ್ಕಳಲ್ಲಿ ಒಬ್ಬನನ್ನು ಬಲಿ ಕೊಡಲು ಸಿದ್ದನಾಗಿದ್ದೆ. ಆದರೆ ಹೆಂಡತಿ ಒಪ್ಪಲಿಲ್ಲ ಈಗ ಏನು ಮಾಡಲಿ ಒಂದೂ ತೊಚುತ್ತಿಲ್ಲ ನನಗೆ (ದುಃಖಿತನಾಗಿ ಹೇಳುತ್ತಾನೆ)
ಸತ್ಯವತಿ : ಅಣ್ಣ.... ಚಿಂತೆ ಯಾಕೆ ಮಾಡುತ್ತಿ ?ನಾನಿಲ್ಲವೇನು? ಇನ್ನು ನಿನ್ನ ಚಿಂತೆಯನ್ನು ಬಿಟ್ಟುಬಿಡು. ನನ್ನ ಮಗನನ್ನು ಬಲಿ ಕೊಡಲು ಸಿದ್ದನಾಗಿದ್ದೇನೆ. ಭೂಮಿಯಲ್ಲಿ ಒಡಹುಟ್ಟಿದವರು ಕಷ್ಟಕ್ಕೆ ಒದಗಿ ಬಾರದೆ ಮತ್ಯಾರು ಬರುತ್ತಾರೆ?.
ದೇವಪಾಂಡ್ಯ : ನನ್ನ ಈ ಕಾರ್ಯಕ್ಕೆ ನಾನು ಕೈಹಿಡಿದಾಕಿಯೇ ಒಪ್ಪಲಿಲ್ಲ. ನಿನಗೆ ಇರುವವನು ಒಬ್ಬ ಮಗ. ಭಾವ ಕೋಪಿಸುವುದಿಲ್ಲವೇ? ಈ ಕೆಲಸ ಬೇಡ. ಬಿಟ್ಟುಬಿಡು.
ಸತ್ಯವತಿ :ಸುಖ ಸಂತೋಷ ಬರುವಾಗ ನಮ್ಮಲ್ಲಿ ಭೇದ ಭಾವವಿತ್ತೇ? ಭಾವನ ಸಮ್ಮತಿ ಪಡೆದೆ ನಾನು ಬಂದಿದ್ದೇನೆ. ಚಿಂತೆಯನ್ನು ಬಿಟ್ಟು ಮುಂದಿನ ಕಾರ್ಯಕ್ಕೆ ಸಿದ್ದನಾಗು. (ಎಂದು ಹೇಳುತ್ತಾ ಮಗನನ್ನು ಸ್ನಾನ ಮಾಡಿಸಿ ಸತ್ಯಾತ್ಮನು ಕಾಪಾಡಲಿ ಎಂದು ಬಲಿಕೊಡಲು ಸಿದ್ದರಾದಳು)

✍ **ಟಿಪ್ಪಣಿ ಬರೆಯಿರಿ**

ನಿಮ್ಮ ಊರಿನಲ್ಲಿರುವ ಸಂಪ್ರದಾಯಗಳ ಬಗ್ಗೆ ತಿಳಿದಿದೆಯೇ? ಮಕ್ಕಳ ಕಟ್ಟು ,ಅಳಿಯ ಕಟ್ಟು ಎಂದು ಹೇಳುವುದನ್ನು ಕೇಳಿರುವಿರಾ? ಆಸ್ತಿ ಭಾಗ ಮಾಡಿ ಆಯಿತು. ಅಣ್ಣ- ತಮ್ಮಂದಿರ, ಅಕ್ಕ-ತಂಗಿಯರ ಪಾಲಾಯಿತು ಆಸ್ತಿ ಎಂಬ ಮಾತುಗಳನ್ನು ಕೇಳಿರಬಹುದು. ಇವುಗಳ ಕುರಿತು ಮಕ್ಕಳು ಗುಂಪುಗಳಲ್ಲಿ ಚರ್ಚಿಸಿ ಸರಿಯಾದ ಮಾಹಿತಿಯನ್ನು ಸಂಗ್ರಹಿಸಿಕೊಂಡು ಟಿಪ್ಪಣಿ ತಯಾರಿಸಲಿ. ಅಧ್ಯಾಪಕರ ಮಾದರಿ ಟಿಪ್ಪಣಿಯನ್ನು ಕೊನೆಯಲ್ಲಿ ಪ್ರದರ್ಶಿಸಲಿ.
ಈ ಕಥನ ಕವನದಲ್ಲಿ ಅಳಿಯಕಟ್ಟು, ಅಣ್ಣ ತಂಗಿಯರ ಪ್ರೀತಿ ವಾತ್ಸಲ್ಯದ ಬಗ್ಗೆ ,ವಿವರಣೆ ನೀಡಿದ್ದಾರೆ. ಇದರ ಆಧಾರದಲ್ಲಿ ಅಳಿಯ ಕಟ್ಟು ವಿಷಯದ ಬಗ್ಗೆ ಟಿಪ್ಪಣಿ ಒಂದನ್ನು ತಯಾರಿಸಲಿ.

**ಟಿಪ್ಪಣಿ ಹೀಗೂ ಇರಬಹುದಲ್ಲವೇ?**

ಪ್ರಧಾನ ಕಟ್ಟು ಅಥವಾ ಅಳಿಯ ಕಟ್ಟು ಎಂಬುದು ದೇವಪಾಂಡ್ಯನ ಕಾಲಾ ನಂತರ ಜಾರಿಗೆ ಬಂದಿದೆ ಎಂಬುದು ತುಳುವರ ನಂಬಿಕೆ.ನಮ್ಮದೇಶದಲ್ಲಿಮಾತ್ರವಲ್ಲ.ಬೇರೆಬೇರೆದೇಶಗಳಲ್ಲಿಇದುವಾಡಿಕೆಯಲ್ಲಿದೆಎಂಬುದುಇತಿಹಾಸದಲ್ಲಿಸಾಬೀತಾಗುತ್ತದೆ. ತಂದೆ ಮನೆಯ ಸ್ವತ್ತು ಮಗಳು- ಅಳಿಯನ ಪಾಲಾಗುವುದೇ ಅಳಿಯ ಕಟ್ಟು. ಗಂಡು ಮಕ್ಕಳು ಅದರ ವಾರಸುದಾರರಾದರೆ ಮಕ್ಕಳ ಕಟ್ಟು ಎಂಬುದು ರೂಡಿಯಲ್ಲಿದೆ. ದೇವಪಾಂಡ್ಯ ಹಾಗೂ ಆತನ ತಂಗಿಯರ ಪ್ರೀತಿ ವಾತ್ಸಲ್ಯ ಅಪಾರವಾದದು ಎಂಬುದಕ್ಕೆ ಇಲ್ಲಿ ಕೊಟ್ಟಿರುವ ನಿದರ್ಶನವೇ ಸಾಕ್ಷಿಯಾಗಿದೆ. ನರಬಲಿ ಕೊಡಬೇಕು ಎಂದು ಭೂತ ಹೇಳಿದಾಗ ಪಾಂಡ್ಯ ತನ್ನ ಮಗನನ್ನೇ ಬಲಿ ಕೊಡಲು ನಿರ್ಧರಿಸುತ್ತಾನೆ .ಆದರೆ ಹೆಂಡತಿ ಒಪ್ಪದಿದ್ದಾಗ ಚಿಂತಾಕ್ರಾಂತನಾಗಿ ಹಾಸಿಗೆ ಹಿಡಿಯುತ್ತಾನೆ. ಆಕೆ ತನಗೆ ತನ್ನ ಅಪ್ಪನ ಮನೆಯಲ್ಲಿ ಹಕ್ಕಿದೆ ಎಂದು ಹೋಗಿರಬಹುದು. ಇತ್ತ ತಂಗಿ ಅಣ್ಣನ ಪರಿಸ್ಥಿತಿಯನ್ನು ನೋಡಿ ತನಗೂ ತನ್ನ ಮನೆಯಲ್ಲಿ ಹಕ್ಕಿದೆ ಎಂದು ಅಣ್ಣನ ಮೇಲಿನ ಪ್ರೀತಿಯಿಂದ ತನ್ನ ಒಬ್ಬನೇ ಒಬ್ಬ ಮಗನನ್ನು ಬಲಿ ಕೊಡಲು ಸಿದ್ದನಾಗುತ್ತಾಳೆ. ಇಲ್ಲಿ ಅಣ್ಣ- ತಂಗಿಯರ ಪ್ರೀತಿ ವಾತ್ಸಲ್ಯ ಎಷ್ಟರಮಟ್ಟಿಗೆ ಇತ್ತು ಎಂದರೆ ತನ್ನ ಮಗನನ್ನೇ ಬಲಿಕೊಡುವುದಕ್ಕಿಂತಲೂ ಮಿಗಿಲು ಎಂಬುದು ಸ್ಪಷ್ಟವಾಗುತ್ತದೆ. ಇವರಿಬ್ಬರ ಪ್ರೀತಿಗೆ ಸತ್ಯ ತಲೆಬಾಗಿದೆ ಎಂಬುದು ಸಾಬೀತಾಗುತ್ತದೆ. ಭೂತ ನರಬಲಿ ಅಪೇಕ್ಷಿಸದೆ ಪೂರ್ತಿ ಸಂಪತ್ತನ್ನು ಅಳಿಯನಿಗೆ ಕೊಟ್ಟು ಬಿಡು ಎಂದು ಹೇಳಿತು. ಸಂತೋಷದಿಂದ ಸಹೋದರಿಯ ಸುತನಿಗೆ ಎಲ್ಲವನ್ನು ಬರೆದು ಕೊಟ್ಟನು. ಇಲ್ಲಿ ತಂದೆ ಮನೆಯ ಆಸ್ತಿಯೆಲ್ಲವೂ ಮಗಳ ಪಾಲಾಗಿ ಅಳಿಯ ಕಟ್ಟು ಸಂಪ್ರದಾಯ ಪ್ರಾರಂಭವಾಯಿತು ಎಂಬುದು ಜನರ ನಂಬಿಕೆ ಅಣ್ಣ ತಂಗಿಯರ ಪ್ರೀತಿ ವಾತ್ಸಲ್ಯದ ಮುಂದೆ ಸತ್ಯವೂ ತಲೆಬಾಗುತ್ತದೆ ಎಂಬ ಸಂದೇಶವನ್ನು ಇಲ್ಲಿ ತಿಳಿದುಕೊಳ್ಳಬಹುದು.

✍ **ಅಭಿಪ್ರಾಯ ಬರವಣಿಗೆ**

ಹಿಂದಿನ ಚಟುವಟಿಕೆಯಲ್ಲಿ ರೂಢಿಯಲ್ಲಿರುವ ಸಂಪ್ರದಾಯ ಕಟ್ಟುನಿಟ್ಟುಗಳ ಬಗ್ಗೆ ಚರ್ಚಿಸಿ ಆಶಯ ಮನವರಿಕೆಯಾದ ಬಳಿಕ ಅಳಿಯಕಟ್ಟು ವಿಷಯದ ಬಗ್ಗೆ ಟಿಪ್ಪಣಿ ತಯಾರಿಸಿರುವಿರಲ್ಲವೇ? ಅದೇ ರೀತಿಯಲ್ಲಿ ನರಬಲಿ, ಪ್ರಾಣಿಬಲಿಯ ಬಗ್ಗೆಯೂ ಜನರಲ್ಲಿ ಬಲವಾದ ನಂಬಿಕೆಗಳಿವೆ. ಇಲ್ಲಿ ಹಿಂಸೆ ನಡೆಯುತ್ತಿದ್ದರೂ ಊರಿಗೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆಗಳಿಂದ ಜನ ಇಂತಹ ಕೃತ್ಯಗಳನ್ನು ನಡೆಸುತ್ತದೆ ಇರುವರು. ಉದಾಹರಣೆಗೆ ಭೂತಕೋಲ ನಡಿಯುತ್ತಿರುವಾಗ ಕೋಳಿಯ ಬಲಿ ಕೊಡುವುದು ಈಗಲೂ ನಡೆದುಕೊಂಡು ಬರುತ್ತಿದೆ. ಇವುಗಳ ಬಗ್ಗೆ ಸಾಕಷ್ಟು ಚರ್ಚೆ ನಡೆಸಿ ವೈಯಕ್ತಿಕ ಅಭಿಪ್ರಾಯಗಳನ್ನು ಮಂಡಿಸುವುದು. ಅಧ್ಯಾಪಕರು ತಮ್ಮ ಅಭಿಪ್ರಾಯವನ್ನು ಬರೆದು ಮಂಡಿಸುವುದು.

**ಅಭಿಪ್ರಾಯ ಟಿಪ್ಪಣಿ ಹೀಗೂ ಇರಬಹುದಲ್ಲವೇ**

ಪ್ರಾಣಿಬಲಿ, ನರ ಬಲಿ ಎಂದರೆ ಸಾಮಾನ್ಯವಾಗಿ ಧಾರ್ಮಿಕ ಆಚರಣೆಯ ಭಾಗವಾಗಿ ಅಥವಾ ದೇವತೆಯನ್ನು ಸಮಾಧಾನ ಪಡಿಸಲು, ಕಾಪಾಡಲು ಬಲಿ ಕೊಡುವುದಾಗಿದೆ. ಹಲವಾರು ಕಡೆಗಳಲ್ಲಿ ಭಕ್ತಾದಿಗಳು ದೇವರ ಹೆಸರಿನಲ್ಲಿ ಕುರಿ, ಕೋಳಿ, ಆಡು ಇತ್ಯಾದಿ ಪ್ರಾಣಿಗಳನ್ನು ಹರಕೆಯಾಗಿ ಪ್ರಾಣಿ ಬಲಿ ನೀಡುತ್ತಿದ್ದಾರೆ. ಇದರಿಂದ ಅಕ್ಕಪಕ್ಕದಲ್ಲಿ ಪರಿಸರ ಮಲಿನವಾಗುತ್ತದೆ. ಬಲಿ ನೀಡಿದ ಪ್ರಾಣಿಗಳ ತ್ಯಾಜ್ಯ ಅಲ್ಲೇ ಎಸೆಯಲ್ಪಟ್ಟು ಪರಿಸರ ಮಲಿನಗೊಳ್ಳುತ್ತಿದೆ. ಇದರಿಂದಾಗಿ ರೋಗರುಜಿನಗಳು ಹರಡುವ ಸಾಧ್ಯತೆ ಇದೆ. ಮೂಢನಂಬಿಕೆಗಳ ಹೆಸರಿನಲ್ಲಿ ಸಾಕಷ್ಟು ಪ್ರಾಣಿಗಳ ಹತ್ಯೆ ನಡೆಯುತ್ತಿದೆ. ಮೂಢನಂಬಿಕೆಯು ಎಷ್ಟು ಆಳವಾಗಿ ಜನರಲ್ಲಿ ಬೇರೂರಿದೆ ಎಂದರೆ ಜನರು ತಮ್ಮ ಸ್ವಂತ ಮಕ್ಕಳನ್ನು ಬಲಿ ಕೊಡಲೂ ಹೇಸುವುದಿಲ್ಲ. ಇಂದಿನ ವೈಜ್ಞಾನಿಕ ಯುಗದಲ್ಲಿಯೂ ಇಂತಹ ಮೂಢನಂಬಿಕೆಗಳು ರೂಢಿಯಲ್ಲಿವೆ. ಇವೆಲ್ಲವನ್ನು ಇಂದಿನ ಯುವ ಜನಾಂಗ ಖಂಡಿಸಿ ನರಬಲಿ, ಪ್ರಾಣಿಬಲಿ, ಪಕ್ಷಿ ಬಲಿ ಮುಂತಾದವುಗಳನ್ನು ನಿಲ್ಲಿಸಿ ಅವುಗಳಿಗೂ ಸ್ವತಂತ್ರವಾಗಿ ಬದುಕುವ ಹಕ್ಕಿದೆ ಎಂಬುದನ್ನು ಸಮಾಜಕ್ಕೆ ತಿಳಿಸುವಂತಹ ಕಾರ್ಯಗಳಲ್ಲಿ ನಿರತರಾಗಬೇಕು.

✍ **ಪ್ರಾಸ ಪದಗಳು**

ಕಥನ ಕವನದಲ್ಲಿ ಕೆಲವು ಸಾಲುಗಳ ಕೊನೆಯಲ್ಲಿ ಅಥವಾ ಪ್ರಾರಂಭದಲ್ಲಿ ಒಂದೇ ರೀತಿಯ ಪದಗಳು ಕಂಡುಬರುತ್ತವೆ. ಇಂತಹ ಪದಗಳನ್ನು ಪ್ರಾಸ ಪದಗಳು ಎನ್ನುವರು. ಪ್ರಾಸ ಪದಗಳಿಗೆ ಒಂದೆರಡು ಉದಾಹರಣೆಗಳನ್ನು ನೀಡಲಾಗಿದೆ. ಇವುಗಳನ್ನು ಕರಿಹಲಗೆಯಲ್ಲಿ ಬರೆದು ಮಕ್ಕಳು ಬರೆಯುವುದು. ಇದೇ ರೀತಿ ಪ್ರಾಸ ಪದಗಳು ಕಥನ ಕವನದಲ್ಲಿಯೂ ಬಂದಿವೆ. ಅವುಗಳನ್ನು ಹುಡುಕಿ ಬರೆಯಲಿ.

ಶುಭವಿರಲು- ಹಡಗನಿಳಿಸಿಸಿರಲು

ನಡುನಡುಗಿ - ಗುಡುಗುಡುಗಿ

............ಇತ್ಯಾದಿ

✍ **ಮಾದರಿಯಂತೆ ಬರೆಯಿರಿ**

ಕಥನ ಕವನದಲ್ಲಿ ಬಂದಿರುವ ಸಂಧಿ ಪದಗಳನ್ನು ಪಟ್ಟಿ ಮಾಡಲು ಹೇಳುವುದು. ಅನಂತರ ಗುಂಪಿನಲ್ಲಿ ಪದಗಳನ್ನು ವಿಂಗಡಿಸಿ ಬರೆದು, ಮಾದರಿಯಲ್ಲಿ ಕೊಟ್ಟಿರುವಂತೆ ಉಳಿದ ಪದಗಳನ್ನೂ ವಿಂಗಡಿಸಿ ಬರೆಯಲು ತಿಳಿಸುವುದು.

ತೊಲಗಿಸದೆ + ಇದ್ದರೆ = ತೊಳಗಿಸದಿದ್ದರೆ

ಕಥೆ +ಒಂದು = ಕಥೆಯೊಂದು

ಬಂದಂತೆ +ಎನಗೆ +ಆಯಿತು = ಬಂದಂತೆನಗಾಯಿತು

ಹೇಳು +ಎನ್ನ +ಅಗ್ರಜ = ಹೇಳೆನ್ನಗ್ರಜ

✍ **ವಿವರಣೆ ಬರೆಯಿರಿ**

'ಕಂಬಳ' ವಿಷಯದ ಬಗ್ಗೆ ತರಗತಿಯಲ್ಲಿ ಚರ್ಚಿಸಿ ಗುಂಪಿನಲ್ಲಿ ಮಾಹಿತಿ ಸಂಗ್ರಹ ಮಾಡುವುದು.

ಕಂಬಳ ಎಂದರೆ ಏನು?

ಕಂಬಳವನ್ನು ಎಲ್ಲಿ ನಡೆಸುತ್ತಾರೆ?

ಎಂಬ ಪ್ರಶ್ನೆಗಳನ್ನು ಕೇಳಿ ಮಾಹಿತಿ ಸಂಗ್ರಹಿಸಿ ವೈಯಕ್ತಿಕವಾಗಿ ಬರೆಯಲು ಹೇಳುವುದು. ತರಗತಿಯಲ್ಲಿ ಮಂಡಿಸಿದ ನಂತರ ಅಧ್ಯಾಪಕರ ಮಾದರಿ ವಿವರಣೆಯನ್ನು ಪ್ರದರ್ಶಿಸುವುದು.

**ವಿವರಣೆ ಹೀಗೂ ಇರಬಹುದಲ್ಲವೇ?**

**ಕಂಬಳ**

ಕಂಬಳ ಕರಾವಳಿ ಕರ್ನಾಟಕದ ಒಂದು ಜನಪದ ಕ್ರೀಡೆಯಾಗಿದೆ.ದಷ್ಟ ಪುಷ್ಟವಾಗಿ ಬೆಳೆಸಿದ ಕೋಣಗಳನ್ನು ಹಸನಾಗಿ ಹದಮಾಡಿದ ಮಣ್ಣಿನ ಗದ್ದೆಯಲ್ಲಿ ಓಡಿಸುವ ಸ್ಪರ್ಧೆಯೇ ಕಂಬಳ. ಈ ಕ್ರೀಡೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಜಾನಪದದೊಂದಿಗೆ ಹಾಸು ಹೊಕ್ಕಾಗಿದೆ. ಕರಾವಳಿಯ ರೈತರು ಭತ್ತದ ಕೊಯ್ಲಿನ ಅನಂತರ ತಮ್ಮ ಮನೋರಂಜನೆಗೋಸ್ಕರ ಈ ಕ್ರೀಡೆಯನ್ನು ಏರ್ಪಡಿಸುತ್ತಿದ್ದರು.

ಕಂಬಳವನ್ನು ಸಾಧಾರಣ ನವೆಂಬರ್ ತಿಂಗಳ ನಂತರ ಮಾರ್ಚ್ ವರೆಗೆ ನಡೆಸುತ್ತಾರೆ. ಈ ಕ್ರೀಡೆಯನ್ನು ಕೆಲವು ಸಂಘ ಸಮಿತಿಗಳ ಮೂಲಕ ಆಯೋಜಿಸುತ್ತಾರೆ. ಕರಾವಳಿ ಕರ್ನಾಟಕದ ಬೇಸಾಯ ವೃತ್ತಿಯೇ ಪ್ರಮುಖವಾಗಿರುವ ಸಮಾಜದಲ್ಲಿ ಕೋಣಗಳು ಅವರ ಬದುಕಿನ ಅವಿಭಾಜ್ಯ ಅಂಗವಾಗಿವೆ.ಕಂಬಳವು ಆಚರಣೆ, ಆಟವಷ್ಟೇ ಆಗದೆ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಧಾರ್ಮಿಕ ನಂಬಿಕೆಯೂ ಜೊತೆ ಸೇರಿದೆ.

ಕಂಪ ಎಂದರೆ ಕೆಸರು. ಕಳ ಅಂದರೆ ವೇದಿಕೆ, ಸ್ಪರ್ಧೆಯ ಕಣ ಎಂದರ್ಥ. ಅದೂ ಕಂಬಳ ಆಗಿರಬಹುದು ಎಂದು ಹೇಳಲಾಗುತ್ತದೆ. ಮೊದಲ ಬೆಳೆಯ ಕೊಯ್ಲು ಮುಗಿದು ಎರಡನೆಯ ಸುಗ್ಗಿ ಬೆಳೆಗೆ ಭೂಮಿ ಹದಮಾಡುವ ಸಮಯದಲ್ಲಿ ದೊರೆಯುವ ಬಿಡುವಿನ ವೇಳೆಯಲ್ಲಿ ಕಂಬಳವನ್ನು ಆಚರಿಸುತ್ತಾರೆ. ನೀರು ತುಂಬಿದ ಕೆಸರುಗದ್ದೆಯಲ್ಲಿ ಕೋಣಗಳ ನಡುವೆ ಓಟದ ಪಂದ್ಯವನ್ನು ನಡೆಸಲಾಗುತ್ತದೆ. ಕಂಬಳದಲ್ಲಿ ನಾಲ್ಕು ವಿಧಗಳಿವೆ. ಬಾರೆ ಕಂಬಳ,ಪೂಕರೆ,ಅರಸು ಕಂಬಳ, ಆಧುನಿಕ ಕಂಬಳ ಎಂಬ ನಾಲ್ಕು ವಿಧಗಳನ್ನು ಗುರುತಿಸಬಹುದಾಗಿದೆ.ಕೋಣಗಳ ಓಟ ಸಾಂಕೇತಿಕವಾದುದು.

✍ **ಕಥೆ ಬರೆಯಿರಿ**

ಮಕ್ಕಳಲ್ಲಿ ಕಥನ ಕವನವನ್ನು ಓದಲು ಹೇಳುವುದು. ಒಂದೊಂದು ಪದ್ಯದ ಆಶಯವನ್ನು ಬರೆಯಲು ಹೇಳುವುದು. ಕಥೆ ಬರೆಯುವಾಗ ಹೇಗೆ ಪ್ರಾರಂಭಿಸಬೇಕು, ಬೆಳವಣಿಗೆ, ಅಂತ್ಯ ಹೇಗೆ ಇರಬೇಕು ಎಂಬುದರ ಬಗ್ಗೆ ಚರ್ಚಿಸುವುದು. ಅಧ್ಯಾಪಕರು ಕಥೆ ಪ್ರಾರಂಭಿಸಿ ಮಕ್ಕಳಲ್ಲಿ ಒಬ್ಬೊಬ್ಬರಲ್ಲಿ ಒಂದೊಂದು ಸಾಲು ಹೇಳಿಸುವುದು. ಸರಣಿಯಲ್ಲಿ ಮುಂದುವರಿಸುವುದು.

**ಸೂಚಕಗಳು**

- ಶೀರ್ಷಿಕೆ ಇರಬೇಕು
- ಕಥೆಯ ಪ್ರಾರಂಭ
- ವಿವರಣೆ
- ಭಾಷಾ ಶೈಲಿ
- ಮುಕ್ತಾಯ

**ಕಥೆಯು ಹೀಗೂ ಇರಬಹುದಲ್ಲವೇ?**

ಸಾವಿರಾರು ವರ್ಷಗಳ ಹಿಂದಿನ ಕಥೆಯಾಗಿದೆ. 'ಅಳಿಯಕಟ್ಟು' ಎಂಬ ಸಂಪ್ರದಾಯ ಯಾವ ಕಾಲದಲ್ಲಿ,ಯಾಕೆ ಹುಟ್ಟಿತು ಎನ್ನುವುದು ಈ ಕಥೆಯ ವಸ್ತುವಾಗಿದೆ.

ಪಾಂಡ್ಯ ದೇಶದಲ್ಲಿ ಒಬ್ಬ ವರ್ತಕನಿದ್ದನು.ಆತನ ಹೆಸರು ದೇವಪಾಂಡ್ಯ ಎಂದಾಗಿದೆ. ಆತ ತುಂಬ ಶ್ರೀಮಂತನಾಗಿದ್ದನು. ಬೇರೆ ಬೇರೆ ತಂಡಗಳನ್ನು ಮಾಡಿ ಹಡಗಿನಲ್ಲಿ ವಸ್ತುಗಳನ್ನು ಸಾಗಿಸಿ ಸಾಕಷ್ಟು ಹಣಗಳಿಸಿದ್ದನು. ಹಣವಂತನಾಗಿದ್ದ ಈ ವರ್ತಕ ಗುಣವಂತನೂ ಆಗಿದ್ದನು. ಗೌರವ ಮನ್ನಣೆಗಳೆಲ್ಲವೂ ಇವನನ್ನು ಹುಡುಕಿಕೊಂಡು ಬರಲು ಪ್ರಾರಂಭಿಸಿದುವು. ಹೀಗೆ ಸಂತೋಷವಾಗಿರುವಾಗ ವ್ಯಾಪಾರವೂ ಅಧಿಕವಾಗತೊಡಗಿತು. ಸಣ್ಣ ಹಡಗು ಸಾಲದಾಯಿತು. ಇನ್ನು ದೊಡ್ಡ ಹಡಗನ್ನು ಖರೀದಿ ಮಾಡುವ ಎಂದು ಯೋಚಿಸಿ ಅದನ್ನು ಕಾರ್ಯಗತಗೊಳಿಸಿದನು.

ವರ್ತಕನ ಆಸೆಯಂತೆ ದೊಡ್ಡ ಹಡಗು ನಿರ್ಮಿಸಲ್ಪಟ್ಟಿತು. ನೀರಿಗಿಳಿಸುವ ಮುನ್ನ ಜೋಯಿಸರಲ್ಲಿ ದಿನ, ತಿಥಿ,ವಾರವನ್ನೆಲ್ಲ ತೋರಿಸಿ ಶುಭದಿನವನ್ನು ಕೇಳಿ ತಿಳಿದುಕೊಂಡನು. ಊರವರನ್ನೆಲ್ಲ ಕರೆದು ಶುಭ ಮುಹೂರ್ತದಲ್ಲಿ ಎಲ್ಲರ ಸಮ್ಮುಖದಲ್ಲಿ ಹಡಗನ್ನು ನೀರಿಗಿಳಿಸಿದನು. ಎಲ್ಲರೂ ಸಂತೋಷದಿಂದಿರಬೇಕಾದರೆ ಗುಡುಗುಡುಗಿ ಶಬ್ದವೊಂದು ಕೇಳಿಸಿತು. ಎಲ್ಲರೂ ಅಚ್ಚರಿಯಿಂದ ಆ ಕಡೆ ನೋಡುತ್ತಿರುವಾಗ "ನಿನ್ನಲಿ ನರಬಲಿ ಸಲ್ಲಲಿ" ಎಂಬ ಮಾತೊಂದು ಕೇಳಿಸಿತು.ಸಿಡಿಲೆರಗಿದಂತಾಯಿತು. ಯಾರನ್ನು ಬಲಿಕೊಡುವುದು ಎಂದು ಚಿಂತಾಕ್ರಾಂತನಾದಾಗ ಆತನೊಡನೆ ಕುಂಡೋದರ ಭೂತವು " ನಿನಗೆ ಏಳೇಳು ಮಕ್ಕಳು ಇರುವರು. ಅವರನಲ್ಲಿ ಒಬ್ಬನನ್ನು ಬಲಿಕೊಡು. ನಿನಗೆ ಹೊಕ್ಕಿರುವ ಮಾರಿಯನ್ನು ಓಡಿಸದಿದ್ದರೆ ಮತ್ತೆ ನಿನಗೆ ಕಷ್ಟಗಳು ಬರುತ್ತಲೇ ಇರುತ್ತವೆ"ಎಂದು ಹೇಳಿತು.

"ಅಯ್ಯೋ ಹಡೆದ ಮಕ್ಕಳನ್ನು ಬಲಿಕೊಡುವುದೇ! ಇದಕ್ಕೆ ಮನಸ್ಸು ಒಪ್ಪುವುದೇ?ಸಕಲ ಐಶ್ವರ್ಯವು ಹೋದರೆ ಹೋಗಲಿ ಮಗನನ್ನು ಕೊಲ್ಲುವುದಿಲ್ಲ"ಎಂದು

ಎಂದು ಹೆಂಡತಿ ಪತಿಯೊಡನೆ ಹೇಳಿದಾಗ ಗಾಯಕ್ಕೆ ಬರೆಯದಂತಾಯ್ತು. ಚಿಂತೆಯಿಂದ ಆತನು ಹಾಸಿಗೆ ಹಿಡಿದನು. ಎಲ್ಲ ಕಡೆಗೂ ಈ ಸುದ್ದಿ ಪಸರಿಸಿತು. ಪಾಂಡ್ಯನ ಸಹೋದರರಿಗೂ ಈ ವಾರ್ತೆ ಸಿಕ್ಕಿತು.ವಿನಯವಂತೆ ,ಗುಣವಂತೆಯಾದ ತಂಗಿ ಅಣ್ಣನನ್ನು ನೋಡಲು ಪತಿ ಹಾಗೂ ಮಗನೊಡನೆ ಓಡೋಡಿ ಬಂದಳು. ಅಣ್ಣನನ್ನು ಸಮೀಪಿಸಿ "ಯಾಕೆ ಮರುಗುತ್ತಿರುವಿ? ಭೂತಕ್ಕೆ ನರಬಲಿ ಕೊಡಲು ನಾನು ವ್ಯವಸ್ಥೆ ಮಾಡುತ್ತೇನೆ .ನನ್ನ ಮಗನನ್ನೇ ಭೂತಕ್ಕೆ ಬಲಿ ಕೊಡಲು ನಿರ್ಧರಿಸಿರುವೆನು" ಎಂದು ಹೇಳುತ್ತಾಳೆ .

ಪಾಂಡ್ಯರಾಜನಿಗೆ ತಂಗಿಯ ಮಾತುಗಳನ್ನು ಕೇಳಿ ಜೇನಿನ ಮಳೆ ಸುರಿದಂತಾಯಿತು. "ಕಷ್ಟಕಾಲದಲ್ಲಿ ಒಡಹುಟ್ಟಿದವರು ಸಹಾಯ ಮಾಡದಿದ್ದರೆ ಬೇರೆ ಯಾರಿದ್ದಾರೆ" ಎಂದು ಅಣ್ಣನೊಡನೆ ಹೇಳಿದಳು. "ನನ್ನ ಕೈಹಿಡಿದ ಪತ್ನಿಯೇ ನಮ್ಮ ಕಾರ್ಯಕ್ಕೆ ಮಗನನ್ನು ಕೊಡಲು ಸಿದ್ಧಳಿರಲಿಲ್ಲ .ನಿನ್ನ ಒಬ್ಬನೇ ಮಗನನ್ನು ಬಲಿಕೊಡುತ್ತಿಯಲ್ಲ. ಬೇಡ ಇದು ಖಂಡಿತಾ ಸಾಧ್ಯವಿಲ್ಲ. ಇದಕ್ಕೆ ಭಾವ ಖಂಡಿತಾ ಕೋಪಿಸಿಕೊಂಡಾರು" ಎಂದು ಹೇಳುತ್ತಾನೆ. ಆಗ ತಂಗಿ "ಸುಖ ಸಂತೋಷವಿರುವಾಗ ನಾವು ಜೊತೆಯಾಗಿದ್ದೆವು. ಕಷ್ಟ ಬಂದಾಗ ಬೇರೆಯಾಗುವುದು ಸರಿಯೇ? ಗಂಡನ ಸಮ್ಮತಿ ಪಡೆದೇ ನಾನು ಈ ನಿರ್ಧಾರಕ್ಕೆ ಬಂದಿರುವೆನು. ನೀನು ನಿನ್ನ ಚಿಂತೆಯನ್ನು ಬಿಟ್ಟುಬಿಡು. ಎದ್ದೇಳು, ಪೂಜಾ ಕಾರ್ಯಕ್ರಮವನ್ನು ನಿರ್ವಿಘ್ನವಾಗಿ ನೆರವೇರಿಸು" ಎಂದಳು.

ಕೊನೆಗೂ ಸತ್ಯವತಿ ತನ್ನ ಮಗನನ್ನು ಸ್ನಾನ ಮಾಡಿಸಿ ಶುಚಿಯಾಗಿ ತಂದು ನಿಲ್ಲಿಸಿ "ಸತ್ಯ ನಮ್ಮನ್ನು ಕಾಯಲಿ" ಎಂದು

ಮಗನನ್ನು ಬಲಿಗಾಗಿ ನೀಡಿದಳು. ಊರವರೆಲ್ಲ ಬಂದು ಸೇರಿದರು.ನರಬಲಿಯನ್ನು ನೋಡಲು ಜನಸಂದಣಿಯೇ ನೆರೆಯಿತು. ಕಠಾರಿಯನ್ನು ತಂದು ಅಳಿಯನನ್ನು ಎದುರು ಕುಳ್ಳಿರಿಸಿ ಇನ್ನೇನು ಕುತ್ತಿಗೆಯನ್ನು ಕಡಿಯಬೇಕು ಎನ್ನುವಷ್ಟರಲ್ಲಿ ಕುಂಡೋದರ ಭೂತ ಪ್ರತ್ಯಕ್ಷವಾಗಿ "ನಿಲ್ಲಿಸು ಪಾಂಡ್ಯನೆ, ಬಲಿ ಬಂದಾಯಿತು. ನಿನ್ನ ಎಲ್ಲ ಸಂಪತ್ತನ್ನೂ ನಿನ್ನ ಅಳಿಯನಿಗೆ ಕೊಡು" ಎಂದು ಹೇಳಿತು. ನೆರೆದ ಜನರೆಲ್ಲರೂ ಹರ್ಷೋದ್ಗಾರ ಮಾಡಿದರು. ಸೋದರಿಯ ಪ್ರೀತಿಯನ್ನು ಮೆಚ್ಚಿದ ದೇವಪಾಂಡ್ಯನು ತನ್ನ ಮರಣಾನಂತರ ತನ್ನ ಎಲ್ಲ ಸೊತ್ತು ಅಳಿಯನಿಗೆ ಎಂದು ಹೇಳಿದನು.ಎಲ್ಲರೂ ಸಂತೋಷದಿಂದ ಮರಳಿದರು.

ಮಾವನ ಮರಣದ ಬಳಿಕ ಆತನ ಮನೆ, ಹಣ, ಬದುಕು,ಗಳಿಸಿದ ಸಂಪತ್ತು, ವ್ಯಾಪಾರವನ್ನೆಲ್ಲ ಅಳಿಯ ಮುಂದುವರಿಸುತ್ತಾ ಧನ,ಜನಮನ್ನಣೆ, ಕೀರ್ತಿಯನ್ನು ಗಳಿಸುತ್ತಾ ಸುಖವಾಗಿ ಬಾಳಿದನು.ಈ ಕಥೆಯನ್ನು ಕೇಳಿದ ಜನರು ಸತ್ಯಯಾವತ್ತಿಗೂ ಜಯವನ್ನು ಪಡೆಯುತ್ತದೆ. ಪ್ರೀತಿಯು ಎಂದಿಗೂ ಶಾಶ್ವತ ಎಂಬುದನ್ನು ಮನಗಂಡು ಅಳಿಯಕಟ್ಟು ಸಂಪ್ರದಾಯವನ್ನೊಪ್ಪಿ ಬಾಳಿದರು.

# ಜಟ್ಟಿಯ ಫಜೀತಿ

ಮಕ್ಕಳಿಗೆ ಕಥೆ ಕೇಳುವುದೆಂದರೆ ತುಂಬಾ ಇಷ್ಟ. ನಿಜ ಜೀವನದಲ್ಲಿ ನಡೆಯುವ ಅದೆಷ್ಟೋ ವಿಚಾರಗಳು ಕಥೆಯಲ್ಲಿ ಅಡಗಿರುತ್ತವೆ. ಜಾನಪದ ಕಥೆಗಳಂತೂ ಮಕ್ಕಳಿಗೆ ಬಹಳ ಖುಷಿಯನ್ನು ಕೊಡುತ್ತದೆ.
ಮಕ್ಕಳು ತಾವು ಕೇಳಿದ ಓದಿದ ಕಥೆಗಳನ್ನು ಹೇಳಲು ಅವಕಾಶ ನೀಡಬೇಕು.ಬಳಿಕ ಪಾಠ ಭಾಗದಲ್ಲಿ ನೀಡಿರುವ "ಜಟ್ಟಿಯ ಫಜೀತಿ" ಎಂಬ ಕಥೆಯನ್ನು ಓದೋಣ ಎಂದು ಹೇಳುತ್ತಾ ಪಾಠ ಪ್ರವೇಶ ಮಾಡುವುದು.

**ಓದಿರಿ**
ಅಧ್ಯಾಪಕರು ತರಗತಿಯಲ್ಲಿ ವಿದ್ಯಾರ್ಥಿಗಳಿಂದ ಕತೆಯನ್ನು ಗಟ್ಟಿಯಾಗಿ ಓದಿಸುವುದು ಮತ್ತು ವಿವರಣೆ ನೀಡುವುದು .ಅರ್ಥ ತಿಳಿಯದ ಪದಗಳನ್ನು ಅರ್ಥ ಕೋಶದ ಸಹಾಯದಿಂದ ತಿಳಿದುಕೊಳ್ಳಲು ತಿಳಿಸುವುದು. ಆಮೇಲೆ ಮಕ್ಕಳು ಕಥೆಯನ್ನು ಮೌನವಾಗಿ ಓದಲಿ.

✍ **ಉತ್ತರಿಸಿರಿ**
ಪಠ್ಯ ಭಾಗದಲ್ಲಿ ಕೊಡಲಾದ ಪ್ರಶ್ನೆಗಳನ್ನು ಅಧ್ಯಾಪಕರು ಕೇಳುವುದು .ಮಕ್ಕಳು ಗುಂಪಿನಲ್ಲಿ ಚರ್ಚಿಸಿ ಉತ್ತರ ಬರೆದು ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಸರಿಯಾದ ಉತ್ತರವನ್ನು ಬರೆಯುವುದು .ಅದನ್ನು ನೋಡಿ ಮಕ್ಕಳು ತಾವು ಬರೆದ ಉತ್ತರವನ್ನು ಉತ್ತಮ ಪಡಿಸಲಿ.

✍ **ಪಾತ್ರ ಚಿತ್ರಣ**
ಕಥೆಯಲ್ಲಿ ಬಂದಿರುವ ಪುಳ್ಕೂರು ಬಾಚನ ಪಾತ್ರದಲ್ಲಿ ಮಕ್ಕಳು ಕಂಡುಕೊಂಡ ವಿಶೇಷತೆಗಳನ್ನು ಬಾಯ್ದೆರೆಯಾಗಿ ಹೇಳಲಿ. ಕಂಡುಕೊಂಡ ಮಾಹಿತಿಯ ಆಧಾರದಲ್ಲಿ ಪಾತ್ರ ಚಿತ್ರಣ ಬರೆದು ಮಂಡಿಸಲಿ.
ಸೂಚಕಗಳು

- ಪುಳ್ಕೂರು ಬಾಚನ ಸ್ವಾಮಿ ನಿಷ್ಠೆ
- ಅವನು ಅರಸನನ್ನು ಸಮಾಧಾನಪಡಿಸಿದ ರೀತಿ
- ಬಾಚನ ಬುದ್ಧಿವಂತಿಕೆ ಮತ್ತು ತಂತ್ರಗಾರಿಕೆ

**ಪಾತ್ರ ಚಿತ್ರಣ ಹೀಗೂ ಇರಬಹುದಲ್ಲವೇ?**

ಜಟ್ಟಿಯ ಫಜೀತಿ ಕಥೆಯಲ್ಲಿ ಪುಳ್ಕೂರು ಬಾಚನ ಸ್ವಾಮಿ ನಿಷ್ಠೆ ಎದ್ದು ಕಾಣುತ್ತದೆ.' ಬುದ್ಧಿಯವರು ಎಂದಿನಂತೆ ಈ ದಿನ ಗೆಲುವಾಗಿಲ್ಲದಿರಲು ಕಾರಣವೇನು? ಈ ಸೇವಕನಲ್ಲಿ ಮರೆಮಾಚದೆ ಹೇಳುವ ಕೃಪೆ ಮಾಡಬೇಕು. ಯಾರು ಅವಮಾನ ಮಾಡಿದರು? ಅಪ್ಪಣೆಯಾಗಲಿ ಅವನನ್ನು ತಂದು ಪ್ರಭುಗಳ ಪಾದದಡಿಯಲ್ಲಿ ಕೆಡಹುವೆನು. ದಯವಿಟ್ಟು ತಿಳಿಸಿರಿ ' ಎಂದು ಹೇಳಿ ತನಗೆ ಆಶ್ರಯ ನೀಡಿದ ರಾಜನ ಮನಸ್ಸಿನ ಬೇಸರವನ್ನು ದೂರ ಮಾಡಲು ಶ್ರಮಿಸುತ್ತಾನೆ. ರಾಜನ ಚಿಂತೆಯ

ಕಾರಣವನ್ನು ತಿಳಿದ ಮೇಲೆ ಸಮಾಧಾನದ ಮಾತುಗಳಿಂದ ಒಡೆಯನನ್ನು ಸಂತೈಸುತ್ತಾನೆ.ಮಧೂರು ಕಂಬಳದಲ್ಲಿ ಹುಚ್ಚೆದ್ದು ಓಡಿದ ಕೋಣವನ್ನು ಹಿಡಿದು ನಿಲ್ಲಿಸಿದ್ದ ಕೆಲಸವನ್ನು ನೆನಪಿಸುತ್ತಾನೆ. ತನ್ನ ಶಕ್ತಿಯ ಮೇಲೆ ಅವನಿಗಿರುವ ಅಪಾರವಾದ ನಂಬಿಕೆ ಮತ್ತು ಅವನ ಬುದ್ಧಿವಂತಿಕೆಯಿಂದ ಕೂಡಿದ ತಂತ್ರಗಾರಿಕೆ ಕೊಚ್ಚಿಯಿಂದ ಬಂದ ಜಟ್ಟಿಯನ್ನು ಓಡಿಸುವಲ್ಲಿ ಯಶಸ್ವಿಯಾಗುತ್ತದೆ.

### ✍ ಲೇಖನ ತಯಾರಿ

ಲಗೋರಿ - -ಒಂದು ಜಾನಪದ ಕ್ರೀಡೆ

**ಸೂಚಕಗಳು**

- ಶೀರ್ಷಿಕೆ
- ಪ್ರಾರಂಭ
- ವಿಷಯ ವಿಸ್ತಾರ
- ಆಶಯ ಕ್ರಮೀಕರಣ
- ಭಾಷಾ ಶೈಲಿ
- ಉಪಸಂಹಾರ

ಲಗೋರಿ ಎಂಬುದು ಭಾರತದ ಒಂದು ಜಾನಪದ ಕ್ರೀಡೆಯಾಗಿದೆ .ಇದು ನಾಲ್ಕು ಅಥವಾ ಅದಕ್ಕಿಂತ ಹೆಚ್ಚು ಜನರು ಆಡುವಂತಹ ಒಂದು ಹೊರಾಂಗಣ ಆಟ. ಸಮಯದ ಮಿತಿ ಇಲ್ಲದೆ ಆಡುವ ಈ ಆಟವು ದೇಹಕ್ಕೆ ವ್ಯಾಯಾಮವನ್ನು ಮನಸ್ಸಿಗೆ ಮನರಂಜನೆಯನ್ನು ಒದಗಿಸುತ್ತದೆ.

ಎರಡು ತಂಡಗಳನ್ನು ಹುಡುಗರು ರಚಿಸಿಕೊಳ್ಳುತ್ತಾರೆ. ಪ್ರತಿ ತಂಡಕ್ಕೂ ಒಬ್ಬ ನಾಯಕನಿರುತ್ತಾರೆ. ತಂಡದ ನಾಯಕರಿಬ್ಬರು ಸೇರಿ ಟಾಸ್ ಹಾಕಿ ಯಾರು ಮೊದಲು ಲಗೋರಿ ಉರುಳಿಸಬಹುದು ಎಂದು ನಿರ್ಧರಿಸುತ್ತಾರೆ. ನಂತರ ನೆಲದಲ್ಲಿ ವೃತ್ತಾಕಾರದ ಗೆರೆ ಕೊರೆದು ಅದರಲ್ಲಿ 7 ಲಗೋರಿ ಕಾಯಿ ಅಥವಾ ಕಲ್ಲಿನ ಸಣ್ಣ ಚಪ್ಪಡಿಗಳನ್ನು ಒಂದರ ಮೇಲೊಂದರಂತೆ ಜೋಡಿಸುತ್ತಾರೆ. ಹೀಗೆ ಜೋಡಿಸಿದ ಕಲ್ಲಿನಿಂದ ಸ್ವಲ್ಪ ದೂರದಲ್ಲಿ ಒಂದು ಗೆರೆಯನ್ನು ಎಳೆಯಬೇಕು.ಆ ಸ್ಥಳದಲ್ಲಿ ನಿಂತು ಚೆಂಡಿನಿಂದ ಲಗೋರಿ ಕಾಯಿಗಳಿಗೆ ಹೊಡೆಯಬೇಕು.

ಪ್ರತಿಯೊಬ್ಬ ಆಟಗಾರರಿಗೂ ಲಗೋರಿ ಉರುಳಿಸಲು ಮೂರು ಅವಕಾಶವಿರುತ್ತದೆ. ಈ ಮೂರು ಎಸೆತದಲ್ಲಿ ಲಗೋರಿ ಉರುಳಿಸಲು ವಿಫಲವಾದರೆ ಅದೇ ತಂಡದ ಮತ್ತೊಬ್ಬನಿಗೆ ಆಡುವ ಅವಕಾಶ. ಲಗೋರಿ ಬೀಳಿಸಲು ಚೆಂಡನ್ನು ಎಸೆದಾಗ ಆ ಚೆಂಡು ಲಗೋರಿ ಉರುಳಿಸದೆ ನೆಲದಿಂದ ಪುಟಿದಾಗ ಎದುರಾಳಿ ತಂಡದವರು ಅದನ್ನು ಕ್ಯಾಚ್ ಹಿಡಿದರೆ ಆಗ ಚೆಂಡನ್ನು ಎಸೆದ ಆಟಗಾರ ಆಟದಿಂದ ಹೊರಕ್ಕೆ ಹೋಗಬೇಕು. ಆಗ ಅದೇ ತಂಡದ ಮುಂದಿನವರಿಗೆ ಆಡುವ ಅವಕಾಶ ಸಿಗುತ್ತದೆ. ಲಗೋರಿಗಳನ್ನು ಮತ್ತೆ ಒಂದರ ಮೇಲೊಂದರಂತೆ ಜೋಡಿಸಿದರೆ ಅವರಿಗೆ ಒಂದು ಅಂಕ. ಹೀಗೆ ಆಟ ಮುಂದುವರೆಯುತ್ತದೆ.

ಈ ರೀತಿಯ ಹಲವಾರು ಜಾನಪದ ಕ್ರೀಡೆಗಳಿವೆ.ಆದರೆ ಇಂದು ಆಧುನಿಕತೆಯ ಭರಾಟೆಯಲ್ಲಿ ಈ ಆಟಗಳು ಅಳಿವಿನಂಚಿಗೆ ಸಾಗುತ್ತಿವೆ .ಇಂತಹ ಜಾನಪದ ಆಟಗಳನ್ನು ಉಳಿಸಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿದೆ.

### ✍ ವಾಕ್ಯ ರಚಿಸಿರಿ

ಒಂದು ಪದದ ಅರ್ಥಕ್ಕೆ ವಿರುದ್ಧ ಅರ್ಥವನ್ನು ಕೊಡುವ ಪದಗಳನ್ನು ವಿರೋಧಾರ್ಥ ಪದಗಳೆನ್ನುವರು. ಪಾಠ ಪುಸ್ತಕದಲ್ಲಿ ನೀಡಿರುವ ಪದಗಳ ವಿರೋಧಾರ್ಥ ಪದಗಳನ್ನು ಅರ್ಥಕೋಶದ ಸಹಾಯದಿಂದ ಕಂಡುಹಿಡಿಯಲಿ. ಬಳಿಕ ಅವುಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಲಿ

ದುಃಖ X ಸಂತೋಷ

ಬೇಸಿಗೆ ರಜೆಯನ್ನು ಕಳೆಯಲು ಅಮ್ಮನೊಂದಿಗೆ ಅಜ್ಜಿ ಮನೆಗೆ ಹೋದ ಮೀನಾಳಿಗೆ ಬಹಳ ಸಂತೋಷವಾಯಿತು.

ಧೈರ್ಯ X ಅಧೈರ್ಯ

ದೇಶಸಂರಕ್ಷಣೆಗೆ ಮುಂದಾದ ಸೈನಿಕರು ಕಠಿಣ ಪರಿಸ್ಥಿತಿಯಲ್ಲೂ ಅಧೈರ್ಯಕ್ಕೊಳಗಾಗಬಾರದು.

ಕೀರ್ತಿ X ಅಪಕೀರ್ತಿ

ಮಕ್ಕಳು ತಾಯಿತಂದೆಯರಿಗೆ ಅಪಕೀರ್ತಿ ತರುವ ಕೆಲಸ ಮಾಡಬಾರದು.

✍ **ಪದ ಹುಡುಕಿರಿ**

ಪಾಠ ಭಾಗವನ್ನು ಓದಿದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಲ್ಲಿ ಸೂಚನೆಗಳಿಗೆ ಹೊಂದಿಕೆಯಾಗುವ ಪದಗಳನ್ನು ಪಾಠ ಭಾಗದಿಂದ ಆರಿಸಲು ತಿಳಿಸುವುದು. ಗುಂಪಿನಲ್ಲಿ ಚಟುವಟಿಕೆ ನಡೆಯಲಿ. ನಿಗದಿತ ಸಮಯದೊಳಗೆ ಪ್ರತೀ ಗುಂಪಿನವರು ಪದ ಕಂಡುಹಿಡಿಯಲಿ.

ಬಳಬಳನೆ

ಬಿಕ್ಕಿಬಿಕ್ಕಿ

ಬಗೆ ಬಗೆ

✍ **ಸಂಗ್ರಹಿಸಿರಿ**

ತುಳುನಾಡು ವಿಭಿನ್ನವಾದ ಇತಿಹಾಸವನ್ನು ಹೊಂದಿದೆ.ಮನುಕುಲಕ್ಕೆ ಆಗುವ ಅನ್ಯಾಯ, ಮೋಸ, ವಂಚನೆಗಳ ಎದುರು ಧ್ವನಿ ಎತ್ತಿ ಹೋರಾಟ ನಡೆಸಿದ ಹಲವು ವೀರರು ತುಳುನಾಡಿನಲ್ಲಿದ್ದಾರೆ.

- ಕೋಟಿ ಚೆನ್ನಯ
- ವೀರರಾಣಿ ಅಬ್ಬಕ್ಕ
- ಕಾಂತ ಬಾರೆ ಬೂದ ಬಾರೆ

ಮೊದಲಾದವರ ಮಾಹಿತಿಗಳನ್ನು ಸಂಗ್ರಹಿಸಿ ಬರೆಯುವುದು.